

# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ
Editor : MARUTI BASAVANTAPPA HOSAMANI
Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ
ಬಾಗಲಕೋಟೆಯಿಂದ ಪ್ರಕಟಿತ
RNI REG No. : KARKAN/2016/75068

SIHI KAHI
KANNADA DAILY MORNING
BAGALKOT

Volume : 07 Issue : 44 Sunday 20-10-2024 E-mail : maruti.b.hosamani76@gmail.com Page: 4 Price : Rs. 1/-


## ವಿದ್ಯಾರ್ಥಿಗಳ ಪ್ರಶ್ನೆಗೆ ಕಾಲೇಜು ಆಡಳಿತ ಮಂಡಳಿ–ಕಕ್ಕಾಬಿಕ್ಕಿ

**ಸಿಹಿ ಕಹಿ ಸುದ್ದಿ**

**ಮಾನ್ವಿ :** ಕಲ್ಮಠ ಆಯುರ್ವೇದಿಕ್ ಮೆಡಿಕಲ್ ಕಾಲೇಜಲ್ಲಿ ಬಡ್ಡಿ ರೂಪದಲ್ಲಿ ಹಣ ಪಡೆಯಲಾಗುತ್ತದೆ ಎಂದು ವಿದ್ಯಾರ್ಥಿಗಳ ಪ್ರಶ್ನೆಗೆಪಂಡಿೀತರಾಧ್ಯಸ್ವಾಮೀಜಿಪ್ರತಿಕ್ರಿಯಿಸಿ ಕೂಡಲೇ ಉಮಾ ಶಂಕರನನ್ನು ಕೆಲಸದಿಂದ ತೆಗೆದು ಹಾಕಲಾಗುವುದು ಎಂದರು.

ರಾಯಚೂರು ಜಿಲ್ಲೆಯ ಮಾನ್ವಿ ಕಲ್ಮಠದ ಆಯುರ್ವೇದಿಕ್ ಮೆಡಿಕಲ್ ಕಾಲೇಜಿನಲ್ಲಿ ಸೌಲಭ್ಯಗಳಿಲ್ಲತಡವಾಗಿಪ್ರವೇಶಶುಲ್ಕಕಟ್ಟಿದ–ರೆ ಬಡ್ಡಿ ರೂಪದಲ್ಲಿ ಹಣ ಕೀಳುತ್ತಿದ್ದಾರೆಂದು ವಿದ್ಯಾರ್ಥಿಗಳು ಆರೋಪಿಸಿದರೆ ಕಾಲೇಜು ಆಡಳಿತ ಮಂಡಳಿಯ ಅಧಿಕಾರಿಗಳು ಕಕ್ಕಾಬಿಕ್ಕಿಯಾದರು.




ಪೋಷಕರು ಹಾಗು ವಿದ್ಯಾರ್ಥಿಗಳು ಉಮಾ ಶಂಕರನನ್ನು ತಡೆದು ಹಿಗ್ಗಾಮುಗ್ಗ ಉಗಿದು ಬಡ ವಿದ್ಯಾರ್ಥಿಗಳ ಹೆಸರಲ್ಲಿ ಲೂಟಿ ಮಾಡುತ್ತೀಯಾ ನಿಮ್ಮ ಮಕ್ಕಳಿಗೆ ಅನ್ಯಾಯವಾದರೆ ಸುಮ್ಮನಿರುತ್ತೀರಾ ಎಂದು ಆಕ್ರೋಶ ವ್ಯಕ್ತಪಡಿಸಿದಾಗ ಕಲ್ಮಠ ಸ್ವಾಮೀಜಿ ವಿದ್ಯಾರ್ಥಿಗಳ ಪ್ರಶ್ನೆಗೆ ಉತ್ತರ ನೀಡದೆ ಎದ್ದು ನಡೆದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಹುಸೇನ್.ಭಾಷಾ.ನಕ್ಕುಂದಿ. ಮಾನ್ವಿ**

## ಪವರ್ ಟಿವಿಯ ಕರುನಾಡ ಕಣ್ಮಣಿ ಪ್ರಶಸ್ತಿಗೆ – ಬುರ್‍ರಕಥಾ ಕಮಲಮ್ಮ ಭಾಜನ

**ಸಿಹಿ ಕಹಿ ಸುದ್ದಿ**

**ಲಿಂಗಸ್ಗೂರ :** ಪವರ್ ಟಿವಿ 6 ನೇ ವಾರ್ಷಿಕೋತ್ಸವದ ಅಂಗವಾಗಿ ಬೆಂಗಳೂರಿನ ಇಬಿಸು ಪ್ಯಾಲೇಸ್ನಲ್ಲಿ ಹಮ್ಮಿಕೊಂಡಿದ್ದ ಪವರ್ ಹಬ್ಬದಲ್ಲಿ ರಾಯಚೂರು ಜಿಲ್ಲೆಯಿಂದ ಮಹಿಳಾ ಕ್ಷೇತ್ರದಲ್ಲಿ ಸಾಧನೆ ಮನಗಂಡು ಪ್ರಸೂತಿ ತಜ್ಞೆ ಹಾಗೂ ಹಟ್ಟಿ ಪಟ್ಟಣದ ಹಿರಿಯ ಬುರ್‍ರಕಥಾ, ಜನಪದ ಕಲಾವಿದೆ ಕಮಲಮ್ಮ ಕರುನಾಡ ಕಣ್ಮಣಿ ಪ್ರಶಸ್ತಿಗೆ ಭಾಜನರಾಗಿ ಪುರಸ್ಕೃತರಾಗಿದ್ದಾರೆ.



ಆಂಧ್ರ ಮತ್ತು ಕರ್ನಾಟಕದ ಗಡಿ ಭಾಗದಲ್ಲಿ ಹೆಚ್ಚಾಗಿ ಪ್ರಚಲಿತದಲ್ಲಿರುವ ಬುರ್‍ರಕಥಾ ಕಲಾವಿದೆ ಈ ಕಮಲಮ್ಮ. ಒಮ್ಮೆ ಹಾಡಲು ನಿಂತರೆ ಹಗಲು–ರಾತ್ರಿ ಗಂಟೆ ಗಟ್ಟಲೇ ಹಾಡುವ ಇವರ ಶೈಲಿಗೆ ಫೀದಾ ಆಗದವರಿಲ್ಲ. ಕಮಲಮ್ಮ ಕಲಾವಿದೆ ಮಾತ್ರವಲ್ಲ, ಸೂಲಗಿತ್ತಿಯೂ ಹೌದು. ಸುಮಾರು 500 ಕ್ಕೂ ಹೆಚ್ಚು ನಾರ್ಮಲ್ ಹೆರಿಗೆ ಮಾಡಿಸಿದ್ದಾರೆ. ಸುತ್ತ ಮುತ್ತಲಿನ ತಮ್ಮ ಸಮುದಾಯದ ಯಾರದೇ ಹೆರಿಗೆ ಇದ್ದರೂ ಕಮಲಮ್ಮನಿಗೆ ಒಂದು ಕರೆಯೊಂದು ಇರುತ್ತಿತ್ತು. ಅಷ್ಟರ ಮಟ್ಟಿಗೆ ಹೆರಿಗೆಯ ಬಾಣಂತಿಯ ಹಾರೈಕೆಯ ಬಗ್ಗೆ ಇವರ ಬಳಿ ಪಿಎಚ್ಡಿ ಮಾಡುವಷ್ಟು ಮಾಹಿತಿ ಇದೆ ಅಂದರೆ ತಪ್ಪಾಗುವುದಿಲ್ಲ. ಜೊತೆಗೆ ತಂದೆ ತಾಯಿ ಮೂಲಕ ನಾಟಿ ಔಷಧಿ ಕೊಡುವುದನ್ನು ಸಹ ಕಲಿತಿದ್ದಾರೆ. ಬೆಟ್ಟ–ಗುಡ್ಡಗಳಲ್ಲಿ, ಕಾಡಿನಲ್ಲಿ ಸಿಗುವ ಸಸ್ಯೌಷಧಿಗಳನ್ನು ತಾವೇ ತಂದು ಕೂಡ ಕೂಸುಗಳಿಗೆ ಬರುವ ನೆಗಡಿ, ಜ್ವರ ಸೇರಿದಂತೆ ದೊಡ್ಡವರಿಗೂ ಇವರು ಔಷಧಿ ಕೊಡುತ್ತಾರೆ. ಆದರೆ ಇವರ ಕಲೆಯ ತಕ್ಕಂತೆ ಮಾಹಿತಿ ದೊರೆತಿಲ್ಲ ಹಾಗಾಗಿ ಕರ್ನಾಟಕ ಜಾನಪದ ಅಕಾಡೆಮಿ, ಯಕ್ಷಗಾನ ಅಕಾಡೆಮಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಕಲೆಯನ್ನು ಗುರುತಿಸಿ, ರೆಕಾರ್ಡ್ ಮಾಡಿಸಿ ಮುಂದಿನ ಪೀಳಿಗೆಗೆ ಪರಿಚಯಿಸ ಬೇಕಿದೆ. ಅದೇ ಆಶಯದೊಂದಿಗೆ ಪ್ರತಿಷ್ಠಿತ ಕರುನಾಡ ಕಣ್ಮಣಿ ಪ್ರಶಸ್ತಿಯನ್ನು ನೀಡಿ ಕಮಲಮ್ಮ ಅವರನ್ನು ಗೌರವಿಸಲು ಪವರ್ ಟಿವಿ ಹರ್ಷ ಪಡುತ್ತದೆ ಎಂದು ಪವರ್ ಟಿವಿಯ ವ್ಯವಸ್ಥಾಪಕ, ನಿರ್ದೇಶಕರಾದ ರಾಕೇಶ್ ಶೆಟ್ಟಿ ಹೇಳಿದರು. ವೇದಿಕೆಯಲ್ಲಿ ಧರ್ಮಸ್ಥಳ ಕ್ಷೇತ್ರದ ಧರ್ಮಾಧಿಕಾರಿಗಳು ಡಾ. ವೀರೇಂದ್ರ ಹೆಗ್ಗಡೆ, ಸಿದ್ದಲಿಂಗ ಶಿವಚಾರ್ಯ ಸ್ವಾಮೀಜಿ ಹಾಗೂ ಪವರ್ ಟಿವಿಯ ಲೋಕೇಶ ಗೌಡ ಎಚ್. ಸಿ ಮುಂತಾದ ಗಣ್ಯರು ಉಪಸ್ಥಿತರಿದ್ದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಪ್ರತಾಪ್.ವಾಯ್.ಕಿಳ್ಳಿ.ಇಲಕಲ್ಲ**

## ಗ್ರಾಮೀಣ ಉತ್ಸವ ಒಗ್ಗಟ್ಟು ಸಹಬಾಳ್ವೆ ಮುಖ್ಯ: ಬಂಗಾರೇಮ್ಮ

**ಸಿಹಿ ಕಹಿ ಸುದ್ದಿ**

**ನಾಗರಾಳ :** ಜಾತ್ರೆ, ಉತ್ಸವಗಳು ಗ್ರಾಮೀಣ ಭಾಗದ ಜನರ ಒಗ್ಗಟ್ಟು, ಸಾಮರಸ್ಯ, ಸಹಬಾಳ್ವೆಗೆ ಮುನ್ನುಡಿಯಾಗಿವೆ ಎಂದು ಹುಣಶ್ಯಾಳ ಗ್ರಾ.ಪಂ ಮಾಜಿ ಅಧ್ಯ–ಕ್ಷೆ ಬಂಗಾರೇಮ್ಮ ಮಾನಪ್ಪ ದೊಡಮನಿ ಹೇಳಿದರು.

ತಾಲೂಕಿನ ನಾಗರಾಳ ಡೋಣದಲ್ಲಿ ಸುತ್ತಲಿನ ಗ್ರಾಮಗಳ ನೇತೃತ್ವದ ಜ್ಞಾನ ದೇವರ ಜಾತ್ರಾ ಮಹೋತ್ಸವದಲ್ಲಿ ಅತಿ–ಥಿಯಾಗಿ ಪಾಲ್ಗೊಂಡ, ಧರ್ಮಸಭೆಯಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದರು. ಮುಂದಿನ ದಿನಗಳಲ್ಲಿ ಈ ಗ್ರಾಮದಲ್ಲಿ ನಿಮ್ಮೆಲ್ಲರ ಸೇವೆ ಮಾಡುವ ಅವಕಾಶ ಸಿಕ್ಕರೆ ಅದು ನನ್ನ ಸೌಭಾಗ್ಯ ಎಂದು ಹೇಳಿದರು.



ಈ ಸಂದರ್ಭದಲ್ಲಿ ನಾವದಗಿಯ ಪ್ರ. ಬ್ರ ರಾಜಗುರು ರಾಜೇಂದ್ರ ಒಡೆ–ಯರ್ ಶಿವಾಚಾರ್ಯರು, ಕಲಕೇರಿಯ ಗುರು ಮಡಿವಾಳೇಶ್ವರ ಶ್ರೀಗಳು ಹಾಗೂ ಚಬನೂರಿನ ಡಾ, ರಾಮಲಿಂಗ ಶ್ರೀಗಳು ದಿವ್ಯ ಸಾನಿಧ್ಯ ವಹಿಸಿದ್ದರು. ಖ್ಯಾತ ನೇತ್ರ ತಜ್ಞರಾದ ಪ್ರಭುಗೌಡ ಲಿಂಗದಳ್ಳಿ ರವರ ಸಹೋದರರಾದ ಸಂಗನಗೌಡ ಚಬನೂರ, ಕೊಂಡಗೊಳಿ ಗ್ರಾಪಂ ಅಧ್ಯಕ್ಷರಾದ, ಲಾಲಬಿ ಸೋಲಾಪುರ, ಸಮಾಜ ಸೇವಕ ಹಣಮಂತರಾಯಗೌಡ ಪಡಗಾನೂರ, ಕೇರೊಟಗಿ ಗ್ರಾಪಂ ಸದಸ್ಯರಾದ ಕಿರಣ ನಾಯಕ ಹಾಗೂ ಜಾತ್ರಾ ಸಮಿತಿಯ ದೇವೇಂದ್ರ ಬಿರಾದಾರ, ಸಂಗಣ್ಣ ಬೋರಗಿ, ದೊಡ್ಡಯ್ಯ ಹಿರೇಮಠ, ಪೀರಪ್ಪ ನಾವಿ, ಹಣಮಂತ್ರಾಯ ಬಿರಾದಾರ, ಬಲವಂತ ಚೌದ್ರಿ, ಸಿದ್ದಪ್ಪ ತಳವಾರ, ಪರು ಚೌದ್ರಿ, ಹುಸೇನ್ ಮುಜಾವರ್, ಬಸವರಾಜ ಕೆಸರಟ್ಟಿ, ನೀಲಪ್ಪಗೌಡ ಗೋನಾಳ, ಹಾಗೂ ಗ್ರಾಮದ ಗಣ್ಯರು. ಭಕ್ತರು ಹಾಗೂ ಸುತ್ತಲಿನ ಹಳ್ಳಿಯ ಅಪಾರ ಸಂಖ್ಯೆಯ ಮಹಿಳೆಯರು, ಮಕ್ಕಳು ಪಾಲ್ಗೊಂಡಿದ್ದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಭೀಮಪ್ಪ.ಹಚ್ಯಾಳ. ದೇವರ ಹಿಪ್ಪರಗಿ**

## ಢಣ ಢಣ ಕಾಂಚಾಣ ವೆಬ್ ಸಿರೀಸ್ ಪೋಸ್ಟರ್ ಬಿಡುಗಡೆ




**ಸಿಂದಗಿ :** ಪಟ್ಟಣದ ಪ್ರವಾಸಿ ಮಂದಿರದಲ್ಲಿ ಗುರುವಾರ ಸೈಬರ್ ಕ್ರೈಂ ವಂಚನೆ ಆಧಾರಿತ 'ಢಣ ಢಣ ಕಾಂಚಾಣ' ವೆಬ್ ಸೀರಿಸ್ನ ಪೋಸ್ಟರ್ನ್ನು ಪ್ರಶಾಂತ ಕದ್ದರಕಿ ಬಿಡುಗಡೆಗೊಳಿಸಿದರು.

ಈ ವೇಳೆ ನಿರ್ಮಾಪಕ ಗುರುರಾಜ ಮಠ ಮಾತನಾಡಿ, ನಿರ್ದೇಶಕ ರಘುಚಂದ್ರ ಬಿರಾದಾರ ಸೈಬರ್ ವಂಚನೆಯ ಕಥಾ ಹಂದರವನ್ನು ಹೆಣೆದು ಈ ವೆಬ್ ಸೀರಿಸ್ ರಚಿಸಿದ್ದಾರೆ. ಬಹುತೇಕ ವಿಜಯಪುರ ಜಿಲ್ಲೆ ಹಾಗೂ ಗ್ರಾಮೀಣ ಭಾಗದಲ್ಲಿ ಶೂಟಿಂಗ್ ಮಾಡಲಾಗಿದ್ದು. ಇಡೀ ವೆಬ್ ಸೀರಿಸ್ ಉತ್ತರ ಕರ್ನಾಟಕ ಭಾಷೆಯನ್ನು ಒಳಗೊಂಡಿದೆ. ಉತ್ತರ ಕರ್ನಾಟಕದ ಕಲಾವಿದರ ನಟನೆಯನ್ನು ಉತ್ತರ ಕರ್ನಾಟಕದ ಸೊಗಡಿನಲ್ಲಿಯೇ ನೋಡಬಹುದಾಗಿದೆ. ಶಿವು ಕುಂಬಾರ, ಶೃತಿ ಪೂಜಾರ, ಸಂತೋಷ ಉಪ್ಪಿನ, ಯಶವಂತ ಕೊಚಬಾಳ, ಪ್ರವೀಣ ಬಿರಾದಾರ ಈ 6ಜನ ಕಲಾವಿದರು ಮುಖ್ಯ ಭೂಮಿಕೆಯಲ್ಲಿ ಕಾಣಿಸಿಕೊಂಡಿದ್ದಾರೆ. ಶೀಘ್ರದಲ್ಲೇ 7 ಎಪಿಸೋಡ್ಗಳು ಓಟಿಟಿಯ ಮೂಲಕ ತೆರೆಗೆ ಬರಲಿದೆ ಎಂದರು.

ಚಲನಚಿತ್ರ ನಟ ಸಂತೋಷ ಉಪ್ಪಿನ ಮಾತನಾಡಿ, ನಿರ್ದೇಶಕ ರಘುಚಂದ್ರ ಬಿರಾದಾರ ರವರ ಉತ್ತರ ಕರ್ನಾಟಕದ ಶೈಲಿಯ ನಿರ್ದೇಶನವು ವಿಭಿನ್ನವಾಗಿ ಮೂಡಿಬಂದಿದೆ. ಈ ಭಾಗದ ಕಲಾವಿದರಿಗೆ ಈ ವೆಬ್ ಸಿರೀಸ್ ಮುಖ್ಯ ವೇದಿಕೆಯಾಗಲಿದೆ ಎಂದರು.

ಈ ವೇಳೆ ನಿರ್ಮಾಪಕ ಭೋಜರಾಜ ದೇಸಾಯಿ, ನಟ ಶಿವು ಕುಂಬಾರ, ನಟ ಸಂತೋಷ ಉಪ್ಪಿನ, ರಂಗಾಯಣ ನಾಗರಾಜ ಹರನೂರ ಇದ್ದರು.

## ಶಿಕ್ಷಣದ ಜೊತೆ ಮಕ್ಕಳಿಗೆ ಉತ್ತಮ ಸಂಸ್ಕಾರ ಕಲಿಸಿ: ಇಂಗಳೇಶ್ವರ ಶ್ರೀ

**ತಾಳಿಕೋಟಿ :** ನಿಮ್ಮ ಮಕ್ಕಳಿಗೆ ಕೇವಲ ಗುಣಮಟ್ಟದ ಶಿಕ್ಷಣ ಕೊಟ್ಟರೆ ಸಾಲದು ಅವರಿಗೆ ಉತ್ತಮ ಸಂಸ್ಕಾರಗಳನ್ನು ಕಲಿಸುವ ಅಗತ್ಯ ಇದೆ. ಕಲಿತ ಮಕ್ಕಳು ಭ್ರಷ್ಟರಾಗಬಹುದು ಆದರೆ ಉತ್ತಮ ಸಂಸ್ಕಾರ ಕಲಿತ ಮಕ್ಕಳು ಎಂದಿಗೂ ಭ್ರಷ್ಟರಾಗಲು ಸಾಧ್ಯವಿಲ್ಲ ಎಂದು ಇಂಗಳೇಶ್ವರ ವಚನಶಿಲಾ ಮಂಟಪದ ಪೂಜ್ಯ ಶ್ರೀ ಚನ್ನಬಸವ ಮಹಾಸ್ವಾಮಿಗಳು ಹೇಳಿದರು. ಪಟ್ಟಣದ ಶ್ರೀ ಹೇಮರೆಡ್ಡಿ ಮಲ್ಲಮ್ಮ ದೇವಸ್ಥಾನದಲ್ಲಿ ಗುರುವಾರ ಹುಣ್ಣಿಮೆ ಸತ್ಸಂಗ ವಿಶೇಷ ಕಾರ್ಯಕ್ರಮದ ಸಾನಿಧ್ಯವಯಿಸಿ ಅವರು ಆಶೀರ್ವಚನ ನೀಡಿ ವೀರಶೈವ ಲಿಂಗಾಯತ ಬಾಂಧವರು ಧರ್ಮ ಸಂಸ್ಕಾರಗಳನ್ನು




ಬೆಳೆಸಿಕೊಳ್ಳಬೇಕು ಧರ್ಮದ ಮೌಲ್ಯಗಳ ಅನುಸರಣೆಯಿಂದಲೇ ಮನುಷ್ಯನಿಗೆ ಶಾಂತಿ ನೆಮ್ಮದಿ ಹಾಗೂ ಯಶಸ್ಸು ಸಿಗಲು ಸಾಧ್ಯ ಎಂದರು.

ನಿವೃತ್ತ ಪ್ರಾಚಾರ್ಯ ಗುರುಪಾದ ಘಿವಾರಿ ಪ್ರಾಸ್ತಾವಿಕವಾಗಿ ಮಾತನಾಡಿ ದೇವರು ಎಂಬುದು ಸರ್ವಕಾಲಿಕವಾದ ಸತ್ಯವಾಗಿದೆ. ಅವನನ್ನು ತಿಳಿದುಕೊಂಡು ದುಷ್ಕರ್ಮಗಳಿಂದ ದೂರವಿದ್ದು ಸತ್ಕರ್ಮಗಳನ್ನು ಮಾಡಿ ಜೀವನ ಸಾರ್ಥಕ ಮಾಡಿಕೊಳ್ಳಬೇಕು ಎಂದರು.ಶಾಂತಮ್ಮ ಕೋಳೂರ ಅಮ್ಮನವರು ಅಧ್ಯಕ್ಷತೆ ವಹಿಸಿದ್ದರು. ಇದೇ ಸಂದರ್ಭದಲ್ಲಿ ಘಿವಾರಿ ದಂಪತಿಗಳನ್ನು ಸಮಿತಿ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಕಾಶಿಬಾಯಿ ಬಂಟನೂರ ಅಮ್ಮನವರು, ಪ್ರಭುಗೌಡ ಮದರಕಲ್ಲ,ಮುಖ್ಯ ಶಿಕ್ಷಕಿ ಸುಮಂಗಲಾ ಕೋಳೂರ,ಕದಳಿ ವೇದಿಕೆ ಅಧ್ಯಕ್ಷೆ ಉಮಾ ಘಿವಾರಿ, ಎಸ್.ಎನ್.ಬಸಣ್ಣವರ,ಸಿ. ಎಂ.ಹಿರೇಮಠ,ಎಸ್.ಎಂ.ಬೇನಾಳಮಠ ಮತ್ತಿತರರು ಉಪಸ್ಥಿತರಿದ್ದರು.

## ಮಾನವೀಯತೆಯೇ ಧರ್ಮ ಎಂದವರು ವಾಲ್ಮೀಕಿ: ಶೇಖರಯ್ಯ ಹಿರೇಮಠ

**ನಾಲತವಾಡ :** 'ಮಾನವಿಯತೆಯೇ ಧರ್ಮ ಎಂಬುದನ್ನು ಪ್ರತಿಪಾದಿಸಿದ ಮಹಾನ್ ದಾರ್ಶನಿಕ ಆದಿಕವಿ ಮಹರ್ಷಿ ವಾಲ್ಮೀಕಿ' ಎಂದು ಮಾತೋಶ್ರೀ ನಿಂಬೆಮ್ಮ ಪದವಿ ಮಹಾ ವಿದ್ಯಾಲಯದ ಪ್ರಥಮದರ್ಜೆ ಸಹಾಯ ಶೇಖರಯ್ಯ ಹಿರೇಮಠ ಹೇಳಿದರು.

ಇಲ್ಲಿಗೆ ಸಮೀಪದ ನಾರಾಯಣಪುರದ ಮಾತೋಶ್ರೀ ನಿಂಬೆಮ್ಮ ಪದವಿ ಕಾಲೇಜಿನಲ್ಲಿ ಜರುಗಿದ ಸಂತ ಕವಿ ಶ್ರೀ ವಾಲ್ಮೀಕಿ ಅವರ ಜಯಂತಿ ಅಂಗವಾಗಿ ವಾಲ್ಮೀಕಿಯವರ ಭಾವ ಚಿತ್ರಕ್ಕೆ ಪೂಜೆ ಹಾಗೂ ಪುಷ್ಪನಮನ ಸಲ್ಲಿಸಿ ಮಾತನಾಡಿದ ಅವರು, 'ಸಾಮಾನ್ಯ ವ್ಯಕ್ತಿಯಾಗಿದ್ದ ವಾಲ್ಮೀಕಿ ತನ್ನ ಸಾಧನಾಶೀಲತೆಯಿಂದ ಜಗತ್ತಿಗೆ ರಾಮಾಯಣದಂತಹ ಆದರ್ಶ




ಗ್ರಂಥವನ್ನು ನೀಡಿ ಸಂತರಾದರು. ಇದಕ್ಕೆ ಅವರಲ್ಲಿದ್ದ ಜ್ಞಾನ ಸಂಪನ್ನತೆ, ಸಾಧನೆ ಕಾರಣ ಎಂದು ಮತ್ತೆ ಮತ್ತೆ ಹೇಳಬೇಕಾಗಿಲ್ಲ.ವಾಲ್ಮೀಕಿ ರಾಮಾಯಣ ಪ್ರತಿನಿತ್ಯ ನಡೆಯುವ ಘಟನೆಗಳಾಗಿದ್ದು, ಶಾಂತಿ, ಸಹಬಾಳ್ವೆ, ಅಹಿಂಸೆಯನ್ನು ಪ್ರತಿಪಾದಿಸಿದ್ದ ವಾಲ್ಮೀಕಿಯಿಂದ ಪಂಪ, ರನ್ನ, ಪೊನ್ನ, ಹರಿಹರ, ರಾಘವಾಂಕ ಮತ್ತಿತರ ಮಹಾನ್ ಕವಿಗಳು ಬೆಳಕಿಗೆ ಬರಲು ಕಾರಣವಾಯಿತು ಎಂದು ಬಣ್ಣಿಸಿದರು. ಈ ವೇಳೆ ಕಾಲೇಜಿನ ಪ್ರಾಚಾರ್ಯ ವಿಜಯಕುಮಾರ ಗುತ್ತೇದಾರ,ರಾಧಾ ಮೇಡಂ, ಶೇಖರ್, ಬಸವರಾಜ,ಉಪನ್ಯಾಸಕರಾದ ಮುಜಾವರ್, ಡಾ. ಇಸ್ಮಾಯಿಲ್ ಖಾದ್ರಿ, ಪ್ರೊ. ರಾಜೇಶ್ವರಿ ಇದ್ದರು.

## ವಾಲ್ಮೀಕಿ ಮಹರ್ಷಿಗಳ ಗ್ರಂಥಗಳನ್ನು ಪ್ರತಿ ನಿತ್ಯ ಓದುವ ಹವ್ಯಾಸ ಮಾಡಿ: ಮೇಗಳಗೇರಿ ಕೊಟ್ರೇಶ್



**ಕೊಟ್ಟೂರು :** ಪಟ್ಟಣದ ಸಾರ್ವಜನಿಕ ಗ್ರಂಥಾಲಯದಲ್ಲಿ ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಹೂವಿನ ಹಾರ ಹಾಕಿ ಪುಷ್ಪಾರ್ಚನೆ ಮಾಡಿ ನಮಸ್ಕರಿಸುವ ಮೂಲಕ ಶ್ರೀ ಮಹರ್ಷಿ ವಾಲ್ಮೀಕಿ ಅವರ ಜಯಂತಿಯನ್ನು ಆಚರಿಸಲಾಯಿತು.

ಮಹರ್ಷಿ ವಾಲ್ಮೀಕಿ ಅವರ ಗ್ರಂಥಗಳನ್ನು ಪ್ರತಿನಿತ್ಯ ಓದುವ ಹವ್ಯಾಸವನ್ನು ವಿದ್ಯಾರ್ಥಿಗಳು ಮತ್ತು ನಾವೆಲ್ಲರು ರೂಡಿಸಿಕೊಳ್ಳಬೇಕು ಎಂದು ಶ್ರೀ ಮೇಗಳಗೇರಿ ಕೊಟ್ರೇಶ್ ಉಪನ್ಯಾಸಕರು ವಿದ್ಯಾರ್ಥಿಗಳಿಗೆ ಕರೆ ನೀಡಿದರು. ಈ ಸಂದರ್ಭದಲ್ಲಿ , ಮರಿಯಪ್ಪ , ಅಜ್ಜಪ್ಪ ,ಈಶಪ್ಪ, ಮಲ್ಲಪ್ಪ ಗುಡ್ಲಾನೂರ್, ಕಾಳೇಶ ,ಶ್ರೀನಿವಾಸ್ ಇವರು ವಾಲ್ಮೀಕಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ನಮಸ್ಕರಿಸಿದರು.

## ಶ್ರೇಷ್ಠ ರೈತ ಮತ್ತು ರೈತ ಮಹಿಳೆ ಪ್ರಶಸ್ತಿಗೆ ಅರ್ಜಿ ಆಹ್ವಾನ

**ಮೂಡಲಗಿ :** ಬಾಗಲಕೋಟೆಯ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಆವರಣದಲ್ಲಿ ಡಿಸೆಂಬರ್ 21 ರಿಂದ 23 ರ ವರೆಗೆ ನಡೆಯುವ "ಆರ್ಥಿಕತೆ ಮತ್ತು ಪೌಷ್ಟಿಕತೆಗಾಗಿ ತೋಟಗಾರಿಕೆ" ಎಂಬ ಧ್ಯೇಯದೊಂದಿಗೆ ತೋಟಗಾರಿಕೆ ಮೇಳವನ್ನು ಹಮ್ಮಿಕೊಳ್ಳಲಾಗಿದ್ದು.

ಈ ಮೇಳದಲ್ಲಿ ತೋಟಗಾರಿಕೆ ಕ್ಷೇತ್ರದಲ್ಲಿ ವಿಶೇಷ ಸಾಧನೆ ಮಾಡಿದ ವಿಶಿಷ್ಠ ಕೃಷಿಕರಿಗೆ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆಯ ವ್ಯಾಪ್ತಿಯಲ್ಲಿ ಬರುವ ರಾಜ್ಯದ 24 ಜಿಲ್ಲೆಗಳಿಗೆ ಪ್ರತಿಯೊಂದು ಜಿಲ್ಲೆಗೆ ಒಬ್ಬ ಶ್ರೇಷ್ಠ ತೋಟಗಾರಿಕೆ ರೈತ ಅಥವಾ ರೈತ ಮಹಿಳೆಯನ್ನು ಆಯ್ಕೆ ಮಾಡಿ ಸೂಕ್ತ ಬಹುಮಾನದೊಂದಿಗೆ ಪ್ರಶಸ್ತಿ ನೀಡಿ ಸನ್ಮಾನಿಸಲಾಗುವದು.

ಪ್ರಶಸ್ತಿಗಾಗಿ ಅರ್ಜಿ ಸಲ್ಲಿಸಲು ಬಯಸುವ ಬೆಳಗಾವಿ ಜಿಲ್ಲೆಯ ರೈತ/ರೈತ ಮಹಿಳೆಯರು ಅರ್ಜಿ ನಮೂನೆಯನ್ನು ಡೀನ್ ಕಛೇರಿ, ಕಿತ್ತೂರ ರಾಣಿ ಚನ್ನಮ್ಮ ತೋಟಗಾರಿಕೆ ಮಹಾವಿದ್ಯಾಲಯ, ಅರಭಾವಿ ಅಥವಾ ವಿಸ್ತರಣಾ ಮುಂದಾಳು, ತೋಟಗಾರಿಕೆ ವಿಸ್ತರಣಾ ಶಿಕ್ಷಣ ಘಟಕ, ಅರಭಾವಿಯಲ್ಲಿ ಪಡೆಯಬಹುದು. ಅಥವಾ ತೋವಿವಿಯ ವೆಬ್ಸೈಟ್ uhs-balkot.karnataka.gov.in ಮೂಲಕ ಕೂಡ ಪಡೆದುಕೊಳ್ಳಬಹುದು.

ಭರ್ತಿ ಮಾಡಿದ ಅರ್ಜಿಗಳನ್ನು ದಿನಾಂಕ 5ನೇ ನವೆಂಬರ್ 2024ರ ಒಳಗಾಗಿ ಡೀನ್, ಕಿತ್ತೂರ ರಾಣಿ ಚನ್ನಮ್ಮ ತೋಟಗಾರಿಕೆ ಮಹಾವಿದ್ಯಾಲಯ, ಅರಭಾವಿ ಇವರಿಗೆ ಸಲ್ಲಿಸಬೇಕು.

**ನಿಬಂಧನೆಗಳು:**

ಅರ್ಜಿದಾರರರು ಕಳೆದ ಮೂರು ವರ್ಷಗಳಲ್ಲಿ ಕರ್ನಾಟಕದ ಯಾವುದೇ ಕೃಷಿ,ತೋಟಗಾರಿಕೆ, ಪಶು ಸಂಗೋಪನೆ ಮತ್ತು ಐಸಿಎಆರ್ ಪ್ರಶಸ್ತಿಗಳನ್ನು ತಮ್ಮ ಹಾಗೂ ತಮ್ಮ ಕುಟುಂಬದ ಯಾವುದೇ ಸದಸ್ಯರ ಹೆಸರಿನಲ್ಲಿ ಪಡೆದಿರಬಾರದು.

ಅರ್ಜಿದಾರರು ನಿಗದಿತ ಅರ್ಜಿ ನಮೂನೆಯಲ್ಲಿ ಸಂಪೂರ್ಣ ವಿವರಗಳನ್ನು ಒಳಗೊಂಡ ಮಾಹಿತಿಯನ್ನು ನೀಡಬೇಕು. ಸಲ್ಲಿಕೆಯಾದ ಅರ್ಜಿಗಳನ್ನು ಆಯ್ಕೆ ಸಮಿತಿಯು ಪರಿಶೀಲಿಸಿ ಕಿರುಪಟ್ಟಿ ಮಾಡಿದ ಮೂರು ಕ್ಷೇತ್ರಗಳಿಗೆ ಮಾತ್ರ ಕ್ಷೇತ್ರವೀಕ್ಷಣೆ ಕೈಗೊಳ್ಳಲಾಗುವುದು.

ಆಯ್ಕೆಯು ವಿಶ್ವವಿದ್ಯಾಲಯದ ನಿಯಮ ಹಾಗೂ ಆಯ್ಕೆ ಸಮಿತಿಯ ನಿರ್ಧಾರಕ್ಕೆ ಒಳಪಟ್ಟಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ಡಾ. ಎ. ಎಮ್. ನದಾಫ್, ವಿಸ್ತರಣಾ ಮುಂದಾಳು, ಕಿ.ರಾ.ಚ.ತೋ. ಮಹಾವಿದ್ಯಾಲಯ, ಅರಭಾವಿ ಮೋ. 8660834191 ಸಂಪರ್ಕಿಸಲು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಮಿನಿ ನ್ಯೂಸ್

### ತೋಟಗಾರಿಕೆಯಲ್ಲಿ ಬಿಎಸ್ಸಿ, ಬಿಟೆಕ್ ಪದವಿಗೆ ಪ್ರವೇಶ

**ಬಾಗಲಕೋಟೆ :** ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ಪ್ರಸಕ್ತ ಶೈಕ್ಷಣಿಕ ವರ್ಷಕ್ಕಾಗಿ ಅನಿವಾಸಿ ಭಾರತೀಯರು, ಅವರ ಮಕ್ಕಳು ಹಾಗೂ ಅವರಿಂದ ಪ್ರಾಯೋಜಿತ ಅಭ್ಯರ್ಥಿಗಳಿಗೆ ಬಿಎಸ್ಸಿ (ಹಾನರ್ಸ್) ತೋಟಗಾರಿಕೆ/ಬಿಟೆಕ್ (ಆಹಾರ ತಂತ್ರಜ್ಞಾನ) ಪದವಿ ಕಾರ್ಯಕ್ರಮದ ಪ್ರವೇಶಕ್ಕೆ ಅರ್ಜಿ ಸಲ್ಲಿಸುವ ಅವಧಿಯನ್ನು ಅಕ್ಟೋಬರ 25 ವರೆಗೆ ವಿಸ್ತರಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ವಿಶ್ವವಿದ್ಯಾಲಯದ ವೆಬ್‌ಸೈಟ್ http://uhsbagalkot.karnataka.gov.in ನಿಂದ ಪಡೆಯುವಂತೆ ತೋವಿವಿಯ ಕುಲಸಚಿವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಭೂ ನ್ಯಾಯ ಮಂಡಳಿಗೆ ತುಳಜಾರಾಮ ಆಯ್ಕೆ



**ಜೇವರ್ಗಿ:** ಜೇವರ್ಗಿ ತಾಲ್ಲೂಕಿನ ಭೂ ನ್ಯಾಯ ಮಂಡಳಿಗೆ ಸದಸ್ಯರಾಗಿ ಕಾಂಗ್ರೆಸ್ ಪಕ್ಷದ ಹಿರಿಯ ಮುಖಂಡ ಹಾಗೂ ವಕೀಲರಾದ ತುಳಜಾರಾಮ ಟಿ,ರಾಠೋಡ ಹರವಾಳ ಆಯ್ಕೆಯಾಗಿದ್ದಾರೆ. ಬಂಜಾರ ಸಮಾಜದ ಹಿರಿಯ ಮುಖಂಡರಾದ ತುಳಜಾರಾಮ ರಾಠೋಡ ಹರವಾಳ ಆಯ್ಕೆಯಾಗಿದ್ದಕ್ಕೆ ಜೇವರ್ಗಿ ತಾಲ್ಲೂಕು ಬಂಜಾರ ಸಮಾಜವು ಹರ್ಷ ವ್ಯಕ್ತಪಡಿಸಿದೆ ಎಂದು ಧನರಾಜ ರಾಠೋಡ ಮುತ್ತಕೋಡ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ

### ಮಲ್ಲಣ್ಣ ಹೂಗಾರ ನಿಧನ



**ಕೆಂಭಾವಿ :** ಪುರಸಭೆ ವ್ಯಾಪ್ತಿಯಲ್ಲಿ ಬರುವಂತಹ ವಾರ್ಡ ನಂಬರ್–22 ರ ಪರಸನಹಳ್ಳಿ ಗ್ರಾಮದ ನಿವಾಸಿ ಮಲ್ಲಣ್ಣ ತಂದೆ ಸಕ್ರೆಪ್ಪ ಹೂಗಾರ (50) ಇವರು ಕೆಂಭಾವಿ ಪುರಸಭೆಯಲ್ಲಿ ವಾಲ್ ಮ್ಯಾನ್ ಆಗಿ ಕಾರ್ಯ ನಿರ್ವಹಿಸುತ್ತಿದ್ದರೂ ಶುಕ್ರವಾರ ನಿಧನರಾಗಿದ್ದಾರೆ.ಮೃತರು ಎರಡು ಜನ ಪುತ್ರರು ಓರ್ವ ಪುತ್ರಿ ಸೇರಿದಂತೆ ಅಪಾರ ಬಂದು ಬಳಗ ಅಗಲಿದ್ದಾರೆ ಪುರಸಭೆ ಸಿಬ್ಬಂದಿಯವರು ಸಂತಾಪ ವ್ಯಕ್ತಪಡಿಸಿದ್ದಾರೆ.ಸ್ವಗ್ರಾಮ ಪರಸನಹಳ್ಳಿಯಲ್ಲಿ ಶನಿವಾರ ಮದ್ಯಾಹ್ನ 2:30ಕ್ಕೆ ಅಂತ್ಯಕ್ರಿಯೆ ಜರುಗಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ

# ವಿಶ್ವಕರ್ಮ ಸಮಾಜದ ಸಮಗ್ರ ಸಾಹಿತ್ಯ ಸಂಪೂಟದ ಅವಶ್ಯವಿದೆ

**ಬಾಗಲಕೋಟೆ :** ವಿಶ್ವಕರ್ಮ ಸಮಾಜದ ಬಗ್ಗೆ ಸಾಕಷ್ಟು ಸಾಹಿತ್ಯ ಭಂಡಾರವಿದ್ದು ಅದು ಸಮಗ್ರ ಸಾಹಿತ್ಯ ಸಂಪೂಟದ ಅವಶ್ಯಕತೆ ಇದೆ ಎಂದು ವಿದ್ಯಾಗಿರಿಯ ವಿಶ್ವಕರ್ಮ ಸಮಾಜ ಅಭಿವೃದ್ಧಿ ಸಂಘದ ಅಧ್ಯಕ್ಷರಾದ ವಿ.ಎನ್. ಕಮ್ಮಾರ ಹೇಳಿದರು. ಅವರು ನಗರದ ಕಾಳಿಕಾದೇವಿ ದೇವಸ್ಥಾನದಲ್ಲಿ ವಿಶ್ವಕರ್ಮ ಸಾಹಿತ್ಯ ಪ್ರಚಾರ ಸಮಿತಿ ಹುಬ್ಬಳ್ಳಿ, ವಿಶ್ವಕರ್ಮ ಸಮಾಜ ಸಂಘ ಬಾಗಲಕೋಟೆ ಇವರ ಸಹಯೋಗದಲ್ಲಿ ವಿಶ್ವಕರ್ಮ ಸಾಹಿತ್ಯ ಪ್ರಚಾರ ಸಮಿತಿ ಇದರ ರಜತಮಹೋತ್ಸವ ಸಂಭ್ರಾಚರಣೆಯ ಅಂಗವಾಗಿ ಗ್ರಂಥ ಲೋಕಾರ್ಪಣೆ ಸಮಾರಂಭವನ್ನು ಜ್ಯೋತಿ ಬೇಳಗಿಸುವ ಮೂಲಕ ಉದ್ಘಾಟಿಸಿ ಮಾತನಾಡಿದರು. ವಿಶ್ವಕರ್ಮ ಸಾಹಿತ್ಯ ಕುರಿತಂತೆ ಹುಬ್ಬಳ್ಳಿಯ ವಿಶ್ವಮಯ ಸಾಹಿತ್ಯ ಪ್ರಚಾರ ಸಮೀತಿ ಸಂಚಾಲಕ ಬೀಮಶೇನ್ ಬಡಿಗೇರ ಅವರ ನೇತೃತದಲ್ಲಿ ಸಮಾಜದ ಕುರಿತು, ಸಮುದಾಯದ ಸಾಧಕರ ಕುರಿತು ಮತ್ತು ಸಮಾಜದ ಸಂಸ್ಕೃತಿ ಆಚಾರ ವಿಚಾರಗಳು ಕುರಿತಂತೆ ಸಾಕಷ್ಟು ಗ್ರಂಥಗಳನ್ನು ಹೊರತಂದಿರುವುದು ಶ್ಲಾಘನೀಯವಾಗಿದೆ, ಆ ನಿಟ್ಟಿನಲ್ಲಿ ಸಮುದಾಯದ ನಡೆದು ಬಂದ



ಪರಂಪರೆ, ಸಾಧಕರ ಜೀವನ ಗಾಥೆ, ವಿಶ್ವಕರ್ಮ ಮತ್ತು ವಿಶ್ವಕರ್ಮ ತತ್ವದ ಬಗ್ಗೆ ಸಾಕಷ್ಟ ಸಾಹಿತ್ಯ ಭಂಡಾರವಿದೆ ಇದು ಎಲ್ಲವೂ ಒಂದು ವಿಶ್ವಕರ್ಮ ಸಮಗ್ರ ಸಾಹಿತ್ಯ ಸಂಪೂಟವಾಗಿ ಹೊರ ಬರಬೇಕಾಗಿದೆ ಎಂದರು. ಡಾ.ಶೀಲಾಕಾಂತ ಪತ್ತಾರ ರಚನೆಯಲ್ಲಿ ಮುಡಿಬಂದ ಅಕ್ಕಸಾಲಿಕೆ ಗ್ರಂಥವನ್ನು ಬಿಡುಗಡೆ ಮಾಡಿ ಮಾತನಾಡಿದ ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಡಿ.ಎಂ.ಅಗಳತಕಟ್ಟಿ ವಿಶ್ವಕರ್ಮ ಸಮಾಜ ಪಂಚ ವೃತಿಯ ಕರಿತು ಈ ಗ್ರಂಥ ಬೇಳಕು ಚೆಲ್ಲಲಿದೆ ಎಂದರು. ಬೀಮಶೇನ್ ಬಡಿಗೇರ ಸಂಪಾದಕಿಂ–ತಲ್ಲಿ ಬಂದ ಬೆಳ್ಳಿ ಬೇಡಗು ಗ್ರಂಥವನ್ನು ಸಾಹಿತಿ ಆನಂದ ಮಸಳಿ ಅವರು ಬಿಡುಗಡೆ ಮಾಡಿ ಮಾತನಾಡಿ ಸಮಾಜದ ಸಾಧಕರ ಪರಿಚಯ ಮತ್ತು ಪರಂಪರೆಯನ್ನು ಕುರಿತು ಅನೇಕ ವಿಷಯಗಳ ಬಗ್ಗೆ ಜ್ಞಾನವನ್ನು ಬೀರುತ್ತದೆ ಎಂದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸದ ಬಾಗಲಕೋಟೆ ವಿಶ್ವಕರ್ಮ ಸಮಾಜ ಸಂಘದ ಅಧ್ಯಕ್ಷ ಮೌನೇಶ ಪತ್ತಾರ ಕೆರೂರ ಮಾತನಾಡಿ ಸಂಸ್ಕೃತಿಗಳ ಭಂಡಾರವೇ ವಿಶ್ವಕರ್ಮ ಸಮಾಜವಾಗಿದ್ದು, ಎಲ್ಲರನ್ನು ಪ್ರೀತಿಸುತ್ತಾ ಎಲ್ಲವನ್ನು ಪ್ರಿತಿಸುತ್ತಾ ನಮ್ಮ ಕಲೆ,ಸಂಸ್ಕೃತಿಗಳನ್ನು ಉಳಿಸಿ ಬೆಳಿಸುವ ಕರ್ತವ್ಯ ನಮ್ಮೆಲರದಾಗಿದೆ ಎಂದರು. ಪ್ರಸ್ತಾವಿಕವಾಗಿ ವಿಶ್ವಮಯ ಸಾಹಿತ್ಯ ಪ್ರಚಾರ ಸಮೀತಿ ಸಂಚಾಲಕ ಬೀಮಶೇನ್ ಬಡಿಗೇರ ಮಾತನಾಡಿದರು. ಕಾರ್ಯಕ್ರಮದಲ್ಲಿ ನಿವೃತ್ತ ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರಾದ ವಿ.ಎಸ್. ಪತ್ತಾರ. ವಿ.ವಿ.ಪತ್ತಾರ ಐಹೊಳೆ. ನಾಗರಾಜ ಕಮ್ಮಾರ, ಎಸ್.ಎನ್.ಪತ್ತಾರ. ಎ.ಎಲ್.ಬಡಿಗೇರ. ಪ್ರಕಾಶ

# ಶಾಸಕ ನಾಡಗೌಡ ಜನ್ಮದಿನ: ಹಣ್ಣು–ಹಂಪಲ ವಿತರಣೆ

**ತಾಳಿಕೋಟಿ :** ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಗಮದ ಅಧ್ಯಕ್ಷ, ಶಾಸಕ ಅಪ್ಪಾಜಿ ನಾಡಗೌಡ ಅವರ 67ನೇ ಜನ್ಮದಿನದ ಪ್ರಯುಕ್ತ ಬ್ಲಾಕ್ ಕಾಂಗ್ರೆಸ್ ಹಾಗೂ ನಾಡಗೌಡ ಅಭಿಮಾನಿ ಬಳಗದ ವತಿಯಿಂದ ರೋಗಿಗಳಿಗೆ ಹಣ್ಣು ಹಂಪಲ ವಿತರಿಸಲಾಯಿತು. ಶುಕ್ರವಾರ ಶಾಸಕ ಅಪ್ಪಾಜಿ ನಾಡಗೌಡರ ಹುಟ್ಟು ಹಬ್ಬದ ಅಂಗವಾಗಿ ಪಕ್ಷದ ಮುಖಂಡರು ಕಾರ್ಯಕರ್ತರು ಹಾಗೂ ಅಭಿಮಾನಿಗಳು ಬೆಳಿಗ್ಗೆ ಪಟ್ಟಣದ ಶ್ರೀ ಖಾಸ್ಗತೇಶ್ವರ ಮಠ ಹಾಗೂ ಶ್ರೀ ಹೇಮರೆಡ್ಡಿ ದೇವಸ್ಥಾನದಲ್ಲಿ ವಿಶೇಷ ಪೂಜಾ ಕಾರ್ಯಕ್ರಮಗಳನ್ನು ನೆರವೇ–ರಿಸಿದರು.ನಂತರ ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರವನ್ನೊಳಗೊಂಡು ವಿವಿಧ ಆಸ್ಪತ್ರೆಗಳಲ್ಲಿಯ ಒಳ ರೋಗಿಗಳಿಗೆ ಹಣ್ಣು ಹಂಪಲಗಳನ್ನು ವಿತರಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಹಿರಿಯ ಮುಖಂಡ ಬಿ.ಎಸ್.ಪಾಟೀಲ( ಯಾಳಗಿ) ಅವರು ಶಾಸಕ ಅಪ್ಪಾಜಿ ನಾಡಗೌಡ ಅವರು ಒಬ್ಬ ಸರಳ ಸಜ್ಜನ ರಾಜಕಾರಣಿ ಅವರ 67ನೇ ಜನ್ಮದಿನದ ಅಂಗವಾಗಿ ಪಟ್ಟಣದ ವಿವಿಧ ಆಸ್ಪತ್ರೆಗಳಲ್ಲಿ ಹಣ್ಣು ಹಂಪಲುಗಳನ್ನು



ವಿತರಿಸುತ್ತಿದ್ದೇವೆ.ಅವರು ನೂರು ವರ್ಷಗಳ ಕಾಲ ಸುಖವಾಗಿ ಬಾಳಲಿ ಎಂಬುದು ನಮ್ಮೆಲ್ಲರ ಪ್ರಾರ್ಥನೆಯಾಗಿದೆ ಎಂದರು.ಈ ಸಮಯದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಕೆ. ಚೋರಗಸ್ತಿ.ಜಿಲ್ಲಾ ಉಪಾಧ್ಯಕ್ಷ ಸಿದ್ದನಗೌಡ ಪಾಟೀಲ (ನಾವದಗಿ).ಜಿಲ್ಲಾ ಕಾರ್ಯದರ್ಶಿ ವಿಜಯಸಿಂಗ ಹಜೇರಿ.ಮುಖಂಡರಾದ ಪ್ರಭುಗೌಡ ಮದರಕಲ್.ವಿ.ಸಿ.ಹಿರೇಮಠ. ಅಕ್ಕಮಹಾದೇವಿ ಕಟ್ಟಿಮನಿ. ಶರಣಭೂಪಾಲ ದೇಶಮುಖ. ಬಿ.ಎನ್.ಹಿಪ್ಪರಗಿ. ಸಂಗನಗೌಡ ಅಸ್ಕಿ.ಬಸನಗೌಡ ಬಿರಾದಾರ (ಜೈನಾಪುರ). ಬಸನಗೌಡ ನಾಡಗೌಡ ಶಳ್ಳಗಿ. ಮಲ್ಲಿಕಾರ್ಜುನ ಪಟ್ಟಣಶೆಟ್ಟಿ. ಸಿಕಂದರ ವಠಾರ. ಪರಶರಾಮ ತಂಗಡಗಿ. ಮುಸ್ತಫಾ ಚೌಧರಿ. ಕಾರ್ತಿಕ್ ಕಟ್ಟಿಮನಿ. ಹುಸೇನ ಜಮಾದಾರ.ಅಶ್ವಿನಿ ವಿ. ಪಾಟೀಲ. ರೇಣುಕಾ ಬಿರಾದಾರ. ಶಿವರಾಜ ಗುಂಡಕನಾಳ.ಪಂಚಾಕ್ಷರಿ ಹಿರೇಮಠ. ಅರ್ಜುಣಗಿ ಮುನ್ನಾ. ಮಹಿಬೂಬ ಕೆಂಭಾವಿ. ಮಹೇಶ ಚಲವಾದಿ.ಸಂಗಮೇಶ ದೇಸಾಯಿ. ಆಸಿಫ್ ಕೆಂಭಾವಿ.ಕಾಶಿನಾಥ ದೇಸಾಯಿ. ಗೋಪಾಲ ಕಟ್ಟಿಮನಿ. ಮತ್ತಿತರರು ಇದ್ದರು.

**ಬಿ.ವಿ.ವಿ.ಸಂಘದಲ್ಲಿ ಆಯುಧ ಪೂಜೆ ವೈಭವ : ಸಂಘದ ಎಲ್ಲ ವಾಹನಗಳಿಗೂ ಏಕಕಾಲಕ್ಕೆ ಪೂಜೆ**

# ಉಪಕಾರ & ಕೃತಘ್ನತೆ ಹಿಂದೂ ಧರ್ಮದ ವಿಶಿಷ್ಟವಾದ ಗುಣ: ಡಾ. ವೀರಣ್ಣ ಚರಂತಿಮಠ

**ಬಾಗಲಕೋಟೆ :** ಉಪಕಾರ ಮತ್ತು ಕೃತಘ್ನತೆ ಹಿಂದೂ ಧರ್ಮ ವಿಶಿಷ್ಟವಾದ ಗುಣವಾಗಿದ್ದು, ಆಯುಧಗಳನ್ನು ಪೂಜೆ ಸಲ್ಲಿಸುವ ಮೂಲಕ ಅವುಗಳಿಗೆ ಕೃತಘ್ನತೆಯನ್ನು ಸಲ್ಲಿಸುವ ಪರಂಪರೆ ನಮ್ಮ ದೇಶದಲ್ಲಿದೆ ಎಂದು ಮಾಜಿ ಶಾಸಕರು ಬಿ.ವಿ.ವಿ.ಸಂಘದ ಕಾರ್ಯಾಧ್ಯಕ್ಷರಾದ ಡಾ.ವೀರಣ್ಣ ಚರಂತಿಮಠ ಹೇಳಿದರು. ಅವರು ಬಿ.ವಿ.ವಿ.ಸಂಘದ ಆಟದ ಮೈದಾನದಲ್ಲಿ ಶುಕ್ರವಾರ ಬಿ.ವಿ.ವಿ.ಸಂಘದ ಅಟೋಮೋಭೈಲ ವಿಭಾಗದಿಂದ ಹಮ್ಮಿಕೊಂಡ ಆಯುಧ ಪೂಜೆಯಲ್ಲಿ ಸಂಘದ ಎಲ್ಲ ವಾಹನಗಳಿಗೆ ಏಕಕಾಲಕ್ಕೆ ಪೂಜೆ ಸಲ್ಲಿಸಿ ಮಾತನಾಡಿದರು. ನಮ್ಮ ಬದುಕು ಅತ್ಯಂತ ಸುಖಮಯವಾಗಲು, ಉತ್ಕೃಷ್ಟವಾಗಿರಲು ಯಾವ ಯಾವ ಸಂಗತಿ ನಮಗೆ ಸಹಾಯ ಸಲ್ಲಿಸಿದೆಯೋ ಅವುಗಳನ್ನು ಸ್ಮರಣೆ ಮಾಡುವಂತ ಪರಂಪರೆ ನಮ್ಮ ದೇಶದಲ್ಲಿದೆ, ಅದಕ್ಕಾಗಿ ನಮ್ಮ ಬದುಕಿಗಾಗಿ ಶಸ್ತ್ರ ಹಾಗೂ ಯಂತ್ರ ಮತ್ತು ಸಾಧನಗಳಿಗೆ ಉಪಕಾರ ಸ್ಮರಿಸುವ ಹಿನ್ನೆಲೆಯಲ್ಲಿ ನಾವೂ ಶತ್ರಾತ್ರಗಳು, ಆಯುಧಗಳು,ಯಂತ್ರಗಳು,ರೈತಪರ ಸಲಕರಣೆಗಳನ್ನಿಟ್ಟು ಅವುಗಳನ್ನು ಪೂಜೆ ಸಲ್ಲಿಸುವ ಮೂಲಕ ಅವುಗಳಿ ಕೃತಘ್ನತೆಯನ್ನು ಸಲ್ಲಿಸುವ ಪರಂಪರೆ ನಮ್ಮ ದೇಶದಲ್ಲಿದೆ, ಅಲ್ಲದೆ ವಿಜಯದ ಸಂಕೇತವಾಗಿ ಆಯುಧ ಪೂಜೆಯನ್ನು ಮಾಡಲಾಗುತ್ತಿದ್ದು, ರಾವಣನನ್ನು ಶ್ರೀರಾಮ ಸಂಹಾರ ಮಾಡಿದ ದಿನ, ಶ್ರೀರಾಮ ಅಯೋದ್ಯೆಗೆ ಮರಳಿದ ದಿನ, ಪಾಂಡವರು ವನವಾಸ ಪೂರೈಸಿ ಹಸ್ತಿನಾಪುರಕ್ಕೆ ಬಂದ ದಿನವಾಗಿದ್ದು, ದುಷ್ಟ ಶಕ್ತಿಯ ಸಂಹಾರ ಮಾಡಿದ ದಿನವಾಗಿದ್ದರಿಂದ ಈ ದಿನವನ್ನು ವಿಜಯದಶಮಿ ಎಂದು ಆಚರಿಸಲಾಗುತ್ತಿದೆ ಎಂದರು. ಬಿ.ವಿ.ವಿ.ಸಂಘದ 160ಕ್ಕೂ ಹೆಚ್ಚು ವಾಹನಗಳಿಗೆ ಏಕಕಾಲದಲ್ಲಿ ಪೂಜೆ ಸಲ್ಲಿಸಲಾಯಿತು, ನಂತರ ಎಲ್ಲ ವಾಹನಗಳು ಸಂಘದ ಮೈಧಾನದಿಂದ ವಿದ್ಯಾಗಿರಿ ಇಂಜನೀಯರಿಂಗ್ ಕಾಲೇಜು ಮೈಧಾನದವರೆಗೆ ರೋಡ ಶೋ ಮಾಡಲಾಯಿತು. ಕಾರ್ಯಕ್ರಮದಲ್ಲಿ ಗೌರವ ಕಾರ್ಯದರ್ಶಿ ಮಹೇಶ ಅಥಣಿ, ಜಿ.ಎನ್.ಪಾಟೀಲ, ಲಕ್ಷ್ಮೀನಾರಾಯಣ ಕಾಸಟ್, ಅಶೋಕ ಕರಡಿ, ಸಿ.ಜಿಗಜಿನ್ನಿ, ಎಸ್.ಆರ್.ಮನಹಳ್ಳಿ, ಪ್ರಭುಸ್ವಾಮಿ ಸರಗಣಾಚಾರಿ, ಸಂಗಣ್ಣ ಕಲಾದಗಿ, ಗುರುಬಸವ ಸೂಳಿಬಾವಿ, ಮಲ್ಲಿಕಾರ್ಜುನ ಸಾಸನೂರ, ಮಹಾಂತೇಶ ಶೆಟ್ಟರ, ಶೇಖರಪ್ಪ ಪಟ್ಟಣಶೆಟ್ಟಿ, ಶಿವಕುಮಾರ ಹಿರೇಮಠ, ಎಸ್.ಎಸ್.ಮೊರಬದ,ಶರಣಪ್ಪ ಗುಳೆದ.ಬಿ.ಸಿ.ಇಂಡಿ ಸೇರಿದಂತೆ ಅಟೋಮೋಬೈಲ್ ವಿಭಾಗದ ಸಿಬ್ಬಂದಿ ಭಾಗವಹಿಸಿದ್ದರು.







# ರತನ ಅಪ್ಪಟ ದೇಶಭಕ್ತ

**ವಿಜಯಪುರ :** ಭಾರತ ದೇಶದ ಅಭಿವೃದ್ಧಿಯಲ್ಲಿ ಅತ್ಯುನ್ನತ ಕೊಡುಗೆ ನೀಡಿ ಕೋಟ್ಯಂತರ ಜನರಿಗೆ ಪ್ರತ್ಯಕ್ಷ–ಪರೋಕ್ಷವಾಗಿ ಆಸರೆ ಆದ ಅಪ್ಪಟ ದೇಶಭಕ್ತ, ರಾಷ್ಟ್ರಪ್ರೇಮಿ ಖ್ಯಾತ ಉದ್ಯಮಿ ಮಾನವತಾವಾದಿ ರತನ್ ಟಾಟಾ ಅವರ ಅಗಲಿಕೆಯಿಂದ ರಾಷ್ಟ್ರಕ್ಕೆ ಬಹು ದೊಡ್ಡ ಹಾನಿಯಾಗಿದೆ ಎಂದು ಬಿಜ್ಜರಗಿ ಸಮೂಹ ಸಂಸ್ಥೆಯ ಮುಖ್ಯಸ್ಥ ರಾಜು ಬಿಜ್ಜರಗಿ ಹೇಳಿದರು. ಗುರುವಾರ ನಗರದ ಶ್ರೀ ಸಿದ್ಧೇಶ್ವರ ದೇವಸ್ಥಾನ ಆವರಣದಲ್ಲಿ ಬಿಜ್ಜರಗಿ ಸಮೂಹ ಸಂಸ್ಥೆ ಹಾಗೂ ವಿವಿಧ ಸಂಘ ಸಂಸ್ಥೆಗಳೊಂದಿಗೆ ಸೇರಿ ಆಯೋಜಿಸಿದ್ದ ಉದ್ಯಮಿ ಮಾನವತಾವಾದಿ ರತನ್ ಟಾಟಾ ಅವರ ಶ್ರದ್ಧಾಂಜಲಿ ಸಭೆಯನ್ನುದ್ದೇಶಿಸಿ ಮಾತನಾಡಿದರು. ಸೂಜಿಯಿಂದ ವಿಮಾನದವರೆಗೆ, ಉಪ್ಪಿನಿಂದ ಉಕ್ಕಿನ ಕಾರ್ಖಾನೆವರೆಗೆ ಅನೇಕ ಕಾರ್ಖಾನೆಗಳನ್ನು ಸ್ಥಾಪಿಸಿ ಕೋಟ್ಯಂತರ ಜನರಿಗೆ ಉದ್ಯೋಗ ಸೃಷ್ಟಿಸಿ ಅಪ್ರತಿಮ ಸಾಧನೆ ಮಾಡಿದ್ದ ಪುಣ್ಯಾತ್ಮ ಅವರಾಗಿದ್ದರು ಎಂದರು. ಪ್ರಕೃತಿ ವಿಕೋಪ ಸೇರಿದಂತೆ ದೇಶ ಸಂಕಷ್ಟದಲ್ಲಿದ್ದಾಗ ಸಾವಿರಾರು ಕೋಟಿ ರೂಪಾಯಿ ಪರಿಹಾರ ನೀಡಿ ಮಾನವೀಯತೆ ಮೆರೆದಿರುವ ರತನ ಟಾಟಾ ಅವರು ಕ್ಯಾನ್ಸರ್ ರೋಗಿಗಳಿಗಾಗಿ ಮುಂಬೈಯಲ್ಲಿ ಟಾಟಾ ಕ್ಯಾನ್ಸರ್ ಆಸ್ಪತ್ರೆ ನಿರ್ಮಿಸಿ ಸೇವೆ ನೀಡುತ್ತಿರುವ ಧನ್ವಂತರಿಯಾಗಿದ್ದಾರೆ ಎಂದರು. ವಿಮಾನಯಾನ ಸೇರಿದಂತೆ ಅನೇಕ ಕೈಗಾರಿಕಾ ಉದ್ಯಮಗಳನ್ನು ಸ್ಥಾಪಿಸಿದ ಕೀರ್ತಿ ಅವರದ್ದು, ಶಿಕ್ಷಣ ಸಂಸ್ಥೆಗಳಿಗೆ ಆರ್ಥಿಕ ಸಹಕಾರ, ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್ ನೀಡಿ ಸಹಕಾರಿಯಾಗಿದ್ದಾರೆ ಎಂದು ತಿಳಿಸಿದರು. ಸ್ವಾಮಿ ವೀವೆಕಾನಂದ ಸಂಸ್ಥೆಯ ಮುಖ್ಯಸ್ಥ ರಾಘವ ಅಣ್ಣಿಗೇರಿ ಮಾತನಾಡಿ, ರತನ್ ಟಾಟಾ ಅವರು ದೇಶಕ್ಕೆ ನೀಡಿದ ಕೊಡುಗೆಗಳನ್ನು ಸ್ಮರಿಸಿದರು. ದೇಶ ಮೊದಲು ನಂತರ ನಾನು ಎಂಬ ತತ್ವವನ್ನು ಜೀವನದಲ್ಲಿ ಅಳವಡಿಸಿಕೊಂಡು ಭಾರತೀಯರು ಸೇರಿದಂತೆ ಇಡೀ ಜಗತ್ತಿಗೆ ಮಾದರಿ ಉದ್ಯಮಿಯಾಗಿ ಎಲ್ಲರ ಮನಸ್ಸಿನಲ್ಲಿ ಅಚ್ಚಳಿಯಾಗಿ ನೆಲೆಸಿದ್ದಾರೆ ಎಂದರು. ಪಶುವೈದ್ಯ ಪ್ರಾಣೇಶ ಜಹಗೀರದಾರ ಮಾತನಾಡಿ, ನೌಕರ ವರ್ಗದ ಕುರಿತು ರತನ ಟಾಟಾ ಅಪಾರ ಗೌರವ ಹೊಂದಿದ್ದರು. ಜೊತೆಗೆ ಶ್ವಾನ ಪ್ರಿಯ ಅವರಾಗಿದ್ದರು. ಮುಂಬೈಯಲ್ಲಿ ಶ್ವಾನಗಳಿಗಾಗಿ ಉಚಿತ ಆಸ್ಪತ್ರೆ ಪ್ರಾರಂಭಿಸಿದ್ದನ್ನು ಸ್ಮರಿಸಿದರು. ಯುವ ಮುಖಂಡ ರಾಜು ಗಚ್ಚಿನಮಠ ಮಾತನಾಡಿ, ರತನ ಟಾಟಾ ಅವರಲ್ಲಿ ದೇಶಾಭಿಮಾನ ಬಹಳಷ್ಟಿತ್ತು. ದೇಶದ ರಕ್ಷಣೆಗಾಗಿ ಕಾರ್ಯ ನಿರ್ವಹಿಸುವ ಸೈನಿಕರಿಗೂ ಸಹಕಾರ ನೀಡಿದ್ದನ್ನು ನೆನಪಿಸಿದರು. ಸಂಗನಬಸಪ್ಪ ಸಜ್ಜನ, ಶ್ರೀಹರ್ಷಗೌಡ ಪಾಟೀಲ, ಗುರುಪಾದಯ್ಯ (ಗುರು) ಗಚ್ಚಿನಮಠ, ವಿಜಯಕುಮಾರ ಇಜೇರಿ, ರವೀಂದ್ರ ಬಿಜ್ಜರಗಿ, ಸಂದೀಪ ಬಿಜ್ಜರಗಿ, ಸಂತೋಷ ಗಣಿ, ಸಂಕೇತ ಬಗಲಿ, ಈರಣ್ಣ ಧಾರವಾಡಕರ, ಅಶೋಕ ನ್ಯಾಮಗೌಡ, ರಾಜೇಶ ದೇವಗಿರಿ, ಸಿದ್ದು ಜೋಗೂರ, ಅರುಣ ವಾರದ, ಗಿರೀಶ ಅನಂತಪೂರ, ಶರಣಪ್ಪ ಕೋರಳ್ಳಿ, ಮಹೇಶ ಬಿದನೂರ, ಬಸವರಾಜ ಬೈಚಬಾಳ, ಶರಣು ಸಬರದ, ಗಿರೀಶ ಪಾಟೀಲ, ಮುತ್ತು ಗಂಗಾಧರ ಹಾಗೂ ಬಿಜ್ಜರಗಿ ಮೋಟರ್ಸದ ಸಮೂಹದ ಸಿಬ್ಬಂದಿ, ಉದ್ಯಮಿಗಳು, ವಿವಿಧ ಸಂಘ–ಸಂಸ್ಥೆಗಳ ಪದಾಧಿಕಾರಿಗಳು ಭಾಗವಹಿಸಿದ್ದರು.

## ಮಿನಿ ನ್ಯೂಸ್

# ಶ್ರೀ ಸಿದ್ರಾಮೇಶ್ವರ ಸೌಹಾರ್ದ ಸಹಕಾರಿ ಬ್ಯಾಂಕ್ ಉದ್ಘಾಟನೆ

**ಕೊಲ್ಹಾರ** : ತಾಲೂಕಿನ ಸಿದ್ಧನಾಥ ಗ್ರಾಮದ ನೂತನವಾಗಿ ಶ್ರೀ ಸಿದ್ರಾಮೇಶ್ವರ ಸೌಹಾರ್ದ ಸಹಕಾರಿ ಸಂಘವು ರವಿವಾರ ಮುಂಜಾನೆ 10:30 ಗಂಟೆಗೆ ಉದ್ಘಾಟನೆ ಗೊಳ್ಳುವುದು. ಕಲ್ಮೇಶ್ವರ ದೇವಸ್ಥಾನದ ಹತ್ತಿರ ವಿಜೇತ್ ಕಾಂಪ್ಲೆಕ್ಸ್ ಶುದ್ಧ ನೀರಿನ ಘಟಕ ಎದುರುಗೆ ಉದ್ಘಾಟನೆ ಗೊಳ್ಳುವುದು. ಶ್ರೀ ಸ.ಸ.ಪ್ರಭುಜಿ ಮಹಾರಾಜರು ಶ್ರೀ ಕ್ಷೇತ್ರ ಇಂಚಗೇರಿ ಮಠ ಇವರ ಅಮೃತ ಹಸ್ತದಿಂದ ಪ್ರಾರಂಭಗೊಂಡು ಶ್ರೀ ಸಿದ್ರಾಮೇಶ್ವರ ಸೌಹಾರ್ದ ಸಹಕಾರಿ ಸಂಘ. ನಿ. ನೂತನವಾಗಿ ಆರಂಭಗೊಂಡಿದ್ದು. ದಸರಾ ಹಬ್ಬದ ಪ್ರಯುಕ್ತವಾಗಿ ತಮ್ಮ ಠೇವಣಿಗೆ ಅತಿ ಹೆಚ್ಚು ಆಕರ್ಷಿಕ ಬಡ್ಡಿ ದರವನ್ನು ನೀಡಲು ನಿರ್ಧರಿಸಿದೆ. ಕಡಿಮೆ ದರದಲ್ಲಿ ಬಿಗ್ನಿ ಸಾಲ ನೀಡಲಾಗುವುದು,ಕಾರಣ ಸಿದ್ಧನಾಥ ಮತ್ತು ಹಳೆರೋಳಿ ಅವಳಿ ಗ್ರಾಮಗಳು, ಸಿದ್ದನಾಥ (ಐಖಿ) ಹಳೆರೊಳ್ಳಿ (ಐಖಿ)ಹಾಗೂ ಸುತ್ತಮುತ್ತಲಿನ ಗ್ರಾಮಗಳು ಕೊಲ್ಹಾರ, ಮಳವಾಡ ಮಲಗಾಣ, ಆಸಂಗಿ, ನಾಗರದಿನ್ನಿ,ಮಟ್ಟಿಹಾಳ, ಹಣಮಾಪುರ,ಬಳೂತಿ, ಬಾಗಾನಗರ, ಸುಳಕೋಡ, ಅರಶುಣಗಿ,ಕೌಲಗಿ ಹಾಗೂ ತೆಲಗಿ ಗ್ರಾಮಗಳ ಸಾರ್ವಜನಿಕ ಬಂಧುಗಳು ಹಾಗೂ ಗ್ರಾಹಕರು ಹೆಚ್ಚು ಹೆಚ್ಚು ಠೇವಣಿಗಳನ್ನು ಹೂಡಿ, ಇದರ ಪ್ರಯೋಜನಗಳನ್ನು ಪಡೆದುಕೊಳ್ಳಬೇಕೆಂದು, ಕರಿಯಪ್ಪ ಹ ಜೈನಾಪುರ (ಅಧ್ಯಕ್ಷರಾದ) ಪ್ರಕಟಣೆ ಮೂಲಕ ತಿಳಿಸಿದರು. ಹೆಚ್ಚಿನ ಮಾಹಿತಿಗಳಿಗಾಗಿ ಸಂಪರ್ಕಿಸಿ : 919422575008, 8073470188



### ಸಭಾಪತಿಗೆ ಸನ್ಮಾನಿಸಿದ ರಾಜ್ಯ ಛಲವಾದಿ ಮಹಾಸಭಾ

**ಬಾಗಲಕೋಟ** : ಬಾಗಲಕೋಟ ನಗರಸಭೆಗೆ ಸಭಾಪತಿಯಾಗಿ ಆಯ್ಕೆಯಾಗಿರುವ ಯಲ್ಲಪ್ಪ ನಾರಾಯಣಿಗೆ ಕರ್ನಾಟಕ ರಾಜ್ಯ ಛಲವಾದಿ ಮಹಾಸಭಾ(ರಿ)ದ ಬಾಗಲಕೋಟ ಜಿಲ್ಲಾ ಘಟಕ ಗೌರವಿಸಿತು. ಗೌರವಾಧ್ಯಕ್ಷ ಬಸವರಾಜ ಚಲವಾದಿ ಶಾಲು ಹೊದಿಸಿ ಫಲಪುಷ್ಪ ನೀಡಿ ಶುಭ ಹಾರೈಸಿದರು. ಜಿಲ್ಲಾದ್ಯಕ್ಷ ಪ್ರೇಮನಾಥ ಗರಸಂಗಿ,ಸದಾಶಿವ ಕೊಡಬಾಗಿ ಮಾತನಾಡಿ ನಾರಾಯಣಿ ಅವರ ಅಧಿಕಾರವಾಧಿಯಲ್ಲಿ ನವನಗರ ಅಭಿವೃದ್ಧಿ ಹೊಂದಲಿ ಎಂದು ಆಶಿಸಿದರು. ಸನ್ಮಾನ ಸ್ವೀಕರಿಸಿದ ಯಲ್ಲಪ್ಪ ನಾರಾಯಣಿ ಮಾತನಾಡಿ ದೀನ ದಲಿತರು ಸೇರಿದಂತೆ ಸರ್ವರ ಸಮಸ್ಯೆಗಳಿಗೆ ಸ್ಪಂಧಿಸುವ ಭರವಸೆ ನೀಡಿದರು. ಈ ಸಂದರ್ಭದಲ್ಲಿ ಶ್ರೀಧರ ನೀಲನಾಯಕ, ಹುಲಗೆಪ್ಪ ಹೊದ್ಲುರ, ಶಿವು ಸಿಂಘೆ, ಅಶೋಕ ನೀಲನಾಯಕ, ಗಜು ಕಾಂಬಳೆ, ಚಂದ್ರಕಾಂತ ಸರೀಕಾರ, ಮಹೇಶ ಬೀಳಗಿ, ಮನೋಹರ ಗರಸಂಗಿ, ಶನಸಪ್ಪ ನಾರಾಯಣಿ, ಕುರುಬರ ಸಂಘದ ಜಿಲ್ಲಾಧ್ಯಕ್ಷ ಡಿ.ಬಿ.ಸಿದ್ದಾಪೂರ ಶಿವು ಹನಮಕ್ಕನವರ, ಅಲ್ಪಸಂಖ್ಯಾತರ ಸ್ವಾಭಿಮಾನಿ ಸಂಘದ ಜಿಲ್ಲಾಧ್ಯಕ್ಷ ಶಫಿ ದೊಡಕಟ್ಟಿ ಉಪಸ್ಥಿತರಿದ್ದರು.

### ಹೆಡಿಯಾಲ ಗ್ರಾಮದಲ್ಲಿ ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳನ್ನು ನಾಚಿಸುವಂತಿರುವ ರಾಶಿ ರಾಶಿ ಕೊಳೆತ ತ್ಯಾಜ್ಯ!

# ಗ್ರಾಮ ಪಂಚಾಯತ ಅಭಿವೃದ್ಧಿ ಅಧಿಕಾರಿ ಕಳ್ಳಾಟಕ್ಕೆ ಮೂಲಭೂತ ಸೌಲಭ್ಯಗಳಿಂದ ವಂಚಿತವಾದ ಹೆಡಿಯಾಲ ಗ್ರಾಮ



**ಮೈಸೂರು** : ದಿನನಿತ್ಯ ಬೆಳಗಾದರೆ ಸಾಕು ಶಾಲಾ ಕಾಲೇಜು ವಿದ್ಯಾರ್ಥಿಗಳು ನೂರಾರು ಹಳ್ಳಿಗಳ ಸಾರ್ವಜನಿಕರು ಬೇರೆಡೆಗೆ ತೆರಳಲು ಬಂದು ನಿಲ್ಲುವ ಕೇಂದ್ರ ಸ್ಥಾನ ನಂಜನಗೂಡು ಸರಗೂರು, ಮತ್ತು ಗುಂಡ್ಲುಪೇಟೆ ಮೂರು ತಾಲೂಕುಗಳಿಗೆ ದಿನನಿತ್ಯ ಸಂಚರಿಸುವ ಮಹಿಳೆಯರು, ಮಕ್ಕಳು , ಶಾಲಾ ವಿದ್ಯಾರ್ಥಿನಿಯರಿಗೆ ಬಸ್ ನಿಲ್ದಾಣ ಶೌಚಾಲಯ ಇಲ್ಲವೇ ಇಲ್ಲ ಪ್ರಮುಖವಾಗಿ ಬೇಕಾಗಿರುವ ಮೂಲಭೂತ ಸೌಲಭ್ಯಗಳಿಲ್ಲದೆ ಗರ್ಭಿಣಿ, ಬಾಣಂತಿ ಮತ್ತು ವೃದ್ಧ ಮಹಿಳೆಯರು ಅನುಭವಿಸುವ ವ್ಯಥೆ ಅಷ್ಟಿಷ್ಟಲ್ಲ. ಹಾಗಾದ್ರೆ ಇಷ್ಟೊಂದು ಸಮಸ್ಯೆಗಳಿರುವ ತಾಣ ಯಾವುದು...! ಎಲ್ಲಿದೆ..? ಅಂತೀರಾ..! ಆಶ್ಚರ್ಯ ಬೇಡ ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯನವರ ತವರು ಜಿಲ್ಲೆಯಾಗಿರುವ ಮೈಸೂರು ಜಿಲ್ಲೆಯ ನಂಜನಗೂಡು ತಾಲೂಕಿನ ಹೆಡಿಯಾಲ ಗ್ರಾಮದಲ್ಲಿ ಗ್ರಾಮ ಪಂಚಾಯಿತಿಯ ಪ್ರಭಾರ ಪಿಡಿಓ ನಿರ್ಲಕ್ಷತನಕ್ಕೆ ಮತ್ತು ಸಿಬ್ಬಂದಿಗಳ ದುರಾಡಳಿತದಿಂದ ಹೇಳತಿರದಷ್ಟು ಸಮಸ್ಯೆಗಳ ತಾಣವಾಗಿ ನಿರ್ಮಾಣವಾಗಿದೆ. ಹೆಡಿಯಾಲ ಗ್ರಾಮದ ಯುವಕರು ಮತ್ತು ಬುದ್ಧಿಜೀವಿಗಳು ಮತ್ತು ಪ್ರಜ್ಞಾವಂತರು ಸ್ಥಳೀಯ ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ ದೊಡ್ಡ ಮಟ್ಟದಲ್ಲಿ ಪ್ರತಿಭಟನೆಯನ್ನು ಮಾಡಲು ಸಜ್ಜುಗೊಂಡಿದ್ದಾರೆ. ಹೆಡಿಯಾಲ ಗ್ರಾಮದ ಸರಗೂರಿಗೆ ತೆರಳುವ ಬಸ್ ನಿಲ್ದಾಣದ ಮುಂಭಾಗದಲ್ಲಿ ಸಾಕಷ್ಟು ಟನ್ ಗಟ್ಟಲೆ ಕೊಳೆತು ನಾರುತ್ತಿರುವ ತ್ಯಾಜ್ಯ ಮತ್ತು ಸರ್ಕಾರಿ ಪ್ರೌಢಶಾಲೆಯ ಕಾಂಪೌಂಡ್ ಮುಂಭಾಗದಲ್ಲಿ ಕೊಳೆತು ತ್ಯಾಜ್ಯ ಗಬ್ಬೆದ್ದು ನಾರುತಿದೆ .ಹೆಡಿಯಾಲ ಬೇಗೂರು ಮುಖ್ಯರಸ್ತೆಯ ಎರಡು ಬದಿಯಲ್ಲಿರುವ ಬಾರಿ ಪ್ರಮಾಣದ ಒಳಚರಂಡಿಯ ಕೊಳೆತ ತ್ಯಾಜ್ಯ ಶುಚಿಗೊಳಿಸದೆ ಯಾವ ವೇಳೆಯಲ್ಲಿ ಯಾರು ಚರಂಡಿಗೆ ಬಿದ್ದು ಜೀವ ಕಳೆದುಕೊಳ್ಳುತ್ತಾರೆ ಎಂಬ ಆತಂಕ ಎದುರಾಗಿದೆ. ಸಾಕಷ್ಟು ಜಾನುವಾರುಗಳು ಬಿದ್ದು ಜೀವ ತೇತ್ತಿವೆ ಸಾರ್ವಜನಿಕರ ವಾಸಿಗಳ ಬಡಜನರ ತೆರಿಗೆ ಹಣದಿಂದ ನಿರ್ಮಾಣವಾಗಿದ್ದ ಬಸ್ ನಿಲ್ದಾಣವನ್ನು ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ರಸ್ತೆ ಅಭಿವೃದ್ಧಿಯ ಹೆಸರಿನಲ್ಲಿ ತೆರವು ಮಾಡಿ ಈಗ ಸರ್ಕಾರಿ ಬಸ್ ನಿಲ್ದಾಣದ ಖಾಲಿ ಜಾಗವನ್ನು ಖಾಸಗಿ ವ್ಯಕ್ತಿ ಒತ್ತುವರಿ ಮಾಡಿಕೊಂಡು ಕೊಠಡಿ ನಿರ್ಮಿಸಿಕೊಂಡಿದ್ದಾನೆ. ಸಾಲು ಸಾಲು ಹೇಳತಿ–ರದಷ್ಟು ಸಮಸ್ಯೆಗಳಿರುವ ಹೆಡಿಯಾಲ ಗ್ರಾಮ ಪಂಚಾಯಿತಿ ಪ್ರಭಾರ ಅಭಿವೃದ್ಧಿ ಅಧಿಕಾ–ರಿಯ ನಿರ್ಲಕ್ಷತನದಿಂದ ಮೂಲಭೂತ ಸೌಲಭ್ಯಗಳು ಮಾಯವಾಗಿವೆ. ಶುಚಿತ್ವದ ಹೆಸ–ರಿನಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಂದ ಸಾಕಷ್ಟು ಅನುದಾನ ಬಿಡುಗಡೆಯಾಗಿದೆ ಕೊಳೆತು ಗಬ್ಬೆದ್ದು ನಾರುತ್ತಿರುವ ರಾಶಿ ರಾಶಿ ತ್ಯಾಜ್ಯವನ್ನೇ ಶುಚಿಗೊಳಿಸದೆ ಸಾರ್ವಜನಿಕರು ಬಾಯಿಗೆ ಬಟ್ಟೆ ಹಾಕಿಕೊಂಡು ಸಂಚರಿಸುವ ದುಸ್ಥಿತಿ ಎದುರಾಗಿದೆ .ಹಾಗಾದ್ರೆ ಅಭಿವೃದ್ಧಿಗೆ ಬಿಡುಗಡೆಯಾದ ಹಣ ಯಾರ ಜೇಬು ಸೇರಿದೆ. ಎಂಬುವುದು ಅನುಮಾನ ವ್ಯಕ್ತವಾಗಿದೆ ಕೂಡಲೇ ನಂಜನಗೂಡಿನ ಶಾಸಕ ದರ್ಶನ್ ಧ್ರುವನಾರಾಯಣ್ ಎಚ್ಚೆತ್ತು ಹೆಡಿಯಾಲ ಗ್ರಾಮ ಪಂಚಾಯಿತಿ ಅಧಿಕಾರಿ ವರ್ಗಕ್ಕೆ ಸರ್ಜರಿ ಮಾಡಿ ವಂಚಿತವಾಗಿರುವ ಮೂಲಭೂತ ಸೌಕರ್ಯಗಳನ್ನು ಸಾರ್ವಜನಿಕರಿಗೆ ಕಲ್ಪಿಸಬೇಕಿದೆ.

ಹೆಡಿಯಾಲ ಗ್ರಾಮವು ಮೂರು ತಾಲೂಕುಗಳ ಜನಸಂದಣಿಯ ಕೇಂದ್ರ ಸ್ಥಾನವಾಗಿದೆ ದಿನನಿತ್ಯ ಸಾವಿರಾರು ಜನರು ಶಾಲಾ ಕಾಲೇಜು ವಿದ್ಯಾರ್ಥಿಗಳು ಕೂಲಿ ಕಾರ್ಮಿಕರು ಬಂದು ನಿಲ್ಲುವ ಸಾರ್ವಜನಿಕ ಸ್ಥಳದಲ್ಲಿ ಮಹಿಳೆಯ–ರಿಗೆ ಮತ್ತು ಗರ್ಭಿಣಿ ಬಾಣಂತಿಯರಿಗೆ ಪ್ರಮುಖವಾಗಿ ಬೇಕಾಗಿರುವ ಸಾರ್ವಜನಿಕ ಶೌಚಾಲಯವಿಲ್ಲದ ವ್ಯಥೆಪಡುತ್ತಿದ್ದಾರೆ. ಸಾರ್ವಜನಿಕರು ನಿಲ್ಲುವ ಸ್ಥಳದಲ್ಲಿಯೇ ಸಾಕಷ್ಟು ಕಸದ ರಾಶಿಯ ತ್ಯಾಜ್ಯ ಕೊಳೆತು ಗಬ್ಬೆತು ನಾರುತಿದೆ ಬಸ್ ನಿಲ್ದಾಣದ ಖಾಲಿ ನಿವೇಶನ ಖಾಸಗಿ ವ್ಯಕ್ತಿಯ ಪಾಲಾಗಿದೆ ಸಾಕಷ್ಟು ಸಮಸ್ಯೆಗಳ ತಾಣವಾಗಿದೆ ಸ್ಥಳೀಯ ಶಾಸಕರು ಎಚ್ಚೆತ್ತು ಸಮಸ್ಯೆಗೆ ಮುಕ್ತಿ ನೀಡಬೇಕಿದೆ.

**ಗುರು ಮತ್ತು ಆನಂದ**
**ಹೆಡಿಯಾಲ ಗ್ರಾಮದ ವಾಸಿಗಳು.**

## ಬವಿವ ಸಂಘದಲ್ಲಿ 18 ರಂದು ಉದ್ಯೋಗ ಮೇಳ

**ಬಾಗಲಕೋಟೆ** : ಜಿಲ್ಲಾ ಕೌಶಲ್ಯಾಭಿವೃದ್ಧಿ ಹಾಗೂ ಸಮರ್ಥನಂ ಅಂಗವಿಕಲರ ಸಂಸ್ಥೆ ಸಹಯೋಗದಲ್ಲಿ ಅಕ್ಟೋಬರ 18 ರಂದು ಬೆಳಿಗ್ಗೆ 9 ರಿಂದ ಮಧ್ಯಾಹ್ನ 2 ಗಂಟೆಗೆ ಹಳೆ ಬಸ್ ನಿಲ್ದಾಣದಲ್ಲಿರುವ ಬವಿವ ಸಂಘದ ಬಸವೇಶ್ವರ ಕಲಾ ಮಹಾವಿದ್ಯಾಲಯದಲ್ಲಿ ಉದ್ಯೋಗ ಮೇಳ ಹಮ್ಮಿಕೊಳ್ಳಲಾಗಿದೆ. ಮೇಳದಲ್ಲಿ ಎಸ್.ಎಸ್.ಎಲ್.ಸಿ, ಪಿಯುಸಿ, ಡಿಪ್ಲೋಮಾ ಹಾಗೂ ಯಾವುದೇ ಪದವಿಯಲ್ಲಿ ತೇರ್ಗಡೆಹೊಂದಿರುವ 18 ರಿಂದ 35 ವರ್ಷದೊಳಗಿನ ಅಭ್ಯರ್ಥಿಗಳು 5 ಬಯೋಡಾಟಾ, 5 ಪಾಸ್‌ಪೋರ್ಟ ಪೊಟೋ, ಶೈಕ್ಷಣಿಕ ಅರ್ಹತೆಯ ನಕಲು ಪ್ರತಿ, ಆಧಾರ ಕಾರ್ಡನೊಂದಿಗೆ ಭಾಗವಹಿಸಬಹುದಾಗಿದೆ ಎಂದು ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಮೊನಂ.914815888, 9480809598, 8050413433, 9480809580, 9480596549ಗೆ ಸಂಪರ್ಕಿಸಬಹುದಾಗಿದೆ.




### ನೀರಾವರಿ & ರಸಾವರಿ ಕುರಿತು ತರಬೇತಿ । ವಿವಿಧ ರಾಜ್ಯದ 32 ಜನರಿಗೆ ತರಬೇತಿ

# ತೋಟಗಾರಿಕೆಯಲ್ಲಿ ಸಾಕಷ್ಟು ಅವಕಾಶ:ಡಾ.ಕುಲಕರ್ಣಿ





**ಬಾಗಲಕೋಟೆ** : ದೇಶದಲ್ಲಿ ತೋಟಗಾ–ರಿಕೆ ಬೆಳೆಗಳನ್ನು ಬೆಳೆಯಲು ಸಾಕಷ್ಟು ಅವಕಾಶವಿದ್ದು, ಮಿತವಾದ ನೀರು ಪೋಷಕಾಂಶ ಉಪಯೋಗಿಸಿ ಬೆಳೆಯುವದರಿಂದ ಹೆಚ್ಚಿನ ಆದಾಯ ಪಡೆಯಲು ಸಾದ್ಯವೆಂದು ತೋವಿವಿಯ ಡೀನ್ ಡಾ.ಬಾಲಾಜಿ ಕುಲಕರ್ಣಿ ಹೇಳಿದರು. ತೋವಿವಿಯ ಆವರಣದಲ್ಲಿರುವ ದಾಳಿಂಬೆ ಉತ್ಕೃಷ್ಟ ಕೇಂದ್ರದಲ್ಲಿ ಇಂ–ಡೋ–ಇಸ್ರೋ ಸಹಯೋಗದಲ್ಲಿ ಹಮ್ಮಿಕೊಂಡ ನೀರಾವರಿ ಹಾಗೂ ರಸಾವರಿ ಕುರಿತ ಮೂರು ದಿನದಗಳ ತರಬೇತಿ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಅವರು ಸಣ್ಣ ದೇಶವಾದ ಇಸ್ರೇಲ್‌ನಲ್ಲಿ ನೀರಿನ ಮರು ಬಳಕೆ ಮಾಡಿಕೊಂಡು ಬೆಳೆಗಳನ್ನು ಬೆಳೆಯುತ್ತಿರುವುದು ಒಂದು ಮಾದರಿ ದೇಶವಾಗಿ ಹೊರಹೊಮ್ಮಿದೆ ಎಂದರು.

ಅದರಂತೆ ನಮ್ಮ ದೇಶ ಹಾಗೂ ರಾಜ್ಯದಲ್ಲಿ ಸಹ ಇಸ್ರೇಲ್ ತಂತ್ರಜ್ಞಾನ ಬಳಸಿಕೊಂಡು ತೋಟಗಾರಿಕೆ ಬೆಳೆ ಬೆಳೆದಲ್ಲಿ ಹೆಚ್ಚಿನ ಆದಾಯವನ್ನು ರೈತರು ಪಡೆಯಬಹುದಾಗಿದೆ. ಈ ಮೂರು ದಿನಗಳ ತರಬೇತಿಯಿಂದ ಇಲಾಖಾ ಅಧಿಕಾರಿಗಳು ರೈತರಿಗೆ ಹೊಸ ಹೊಸ ತಂತ್ರಜ್ಞಾನ ಹಾಗೂ ಅವಿಷ್ಕಾರ ರೈತ–ರಿಗೆ ತಲುಪಿಸುವ ಕಾರ್ಯ ಮಾಡಬೇಕು ಎಂದು ಹೇಳಿದರು. ಇಂಡೋ–ಇಸ್ರೇಲ್ ಯೋಜನೆಯ ಪ್ರೋಜೆಕ್ಟ ಅಧಿಕಾರಿ ಬ್ರಹ್ಮದೇವ ಮಾತನಾಡಿ ದೇಶದಲ್ಲಿ ವಿವಿಧ ತೋಟಗಾರಿಕೆ ಬೆಳೆಗಳ ಉತ್ಕೃಷ್ಟ ಕೇಂದ್ರ ಸ್ಥಾಪಿಸಲಾಗಿದ್ದು, ಬಾಗಲಕೋಟೆಯಲ್ಲಿ ದಾಳಿಂಬೆ ಉತ್ಕೃಷ್ಟ ಕೇಂದ್ರ ಸ್ಥಾಪಿಸಲಾಗಿದೆ. ಇವೆಲ್ಲವೂಗಳು ಇಸ್ರೇಲ್ ದೇಶದ ಸಹಯೋಗದೊಂದಿಗೆ ಕಾರ್ಯನಿರ್ವಹಿಸುತ್ತಿದ್ದು, ಇದರ ಪ್ರಯೋಜನ ರೈತರು ಪಡೆದುಕೊಳ್ಳುವಂತೆ ಆಗಬೇಕು ಎಂದರು. ಬೆಂಗಳೂರು ಲಾಲ್‌ಬಾಗ್‌ನ ಅಪರ ನಿರ್ದೇಶಕ ಕೆ.ಬಿ.ದುಂಡಿ ಮಾತನಾಡಿ ಬಾಗಲಕೋಟೆ ಜಿಲ್ಲೆಯ ಮೊದಲಿನಿಂದಲೂ ದಾಳಿಂಬೆ ಬೆಳೆಗೆ ಪ್ರಸಿದ್ದಿಯಾಗಿದೆ. ಪ್ರಸ್ತುತ ತರಬೇತಿಯಿಂದ ಉತ್ತಮ ನೀರಾವರಿ ಮತ್ತು ರಸಾವರಿ ಪದ್ಧತಿಗಳನ್ನು ಉಪಯೋಗಿಸಿಕೊಂಡು ರೈತರು ಬೆಳೆಗಳನ್ನು ಬೆಳೆದಲ್ಲಿ ಆರ್ಥಿಕವಾಗಿ ಸಬಲರಾಗಬಹುದಾಗಿದೆ ಎಂದು ತಿಳಿಸಿದರು.ನೆಟಾಫಿನ್ ಕಂಪನಿಯ ಪರಿಣಿತರಾದ ಪ್ರಶಾಂತ ಮುಂಡೋಳಿ ಮತ್ತು ಸಂದೀಪ ಜಾವಳೇಕರ ಹನಿ ನೀರಾವರಿ ಹಾಗೂ ರಸಾವರಿ ಪದ್ಧತಿ ಬಗ್ಗೆ ವಿವರವಾಗಿ ತಿಳಿಸಿಕೊಟ್ಟರು. ಪ್ರಾರಂಭದಲ್ಲಿ ತೋಟಗಾರಿಕೆ ಇಲಾಖೆಯ ಉಪನಿರ್ದೇಶಕ ರವೀಂದ್ರ ಹಕಾಟೆ ಸ್ವಾಗತಿಸಿದರು. ಗಣೇಶ ಪಟ್ಟಣಶೆಟ್ಟಿ ವಂದಿಸಿದರು.

ತರಬೇತಿಯಲ್ಲಿ ಮಹಾರಾಷ್ಟ್ರ, ಗೋವಾ, ಕೇರಳ, ಗುಜರಾತ ಹಾಗೂ ಕರ್ನಾಟಕ ರಾಜ್ಯದ ಒಟ್ಟು 32 ಜನ ಅಧಿಕಾರಿಗಳು ಪಾಲ್ಗೊಂಡಿದ್ದರು.

# ವಾಣಿಜ್ಯ ವಿದ್ಯಾರ್ಥಿಗಳಿಂದ ದೇಶಿ ನೃತ್ಯ



**ಬಾಗಲಕೊಟೆ** : ಬಸವೇಶ್ವರ ವಾಣೀಜ್ಯ ಕಾಲೇಜಿನ ವಿದ್ಯಾರ್ಥಿಗಳಿಂದ ದೇಶಿ ನೃತ್ಯ ಪ್ರದರ್ಶನ ಜರುಗಿ–ತು, ಮಂಗಳವಾರ ನಗರದ ಬಿ.ವಿ.ವಿ.ಸಂಘದ ನೂತನ ಸಭಾ ಭವನದಲ್ಲಿ ಬಸವೇಶ್ವರ ವಾಣಿಜ್ಯ ಮಹಾವಿದ್ಯಾಲಯದಿಂದ ನವರಾತ್ರಿ ನಿಮಿತ್ಯ ದೇಶ ನೃತ್ಯ ಪ್ರದರ್ಶನ ಹಮ್ಮಿಕೊಳ್ಳಲಾಗಿತ್ತು. ವಿದ್ಯಾರ್ಥಿನಿಯರ 5 ತಂಡಗಳಿಂದ ದಾಂಡಿಯಾ, ಸೇರಿದಂತೆ ಸಮೂಹ ದೇಶಿ ನೃತ್ಯ ಪ್ರದರ್ಶನ ಮಾಡಿ ಗಮನ ಸೇಳೆದರು. ಈ ಸಂದರ್ಭದಲ್ಲಿ ಮಹಾವಿದ್ಯಾಲಯ ಪ್ರಾಚಾರ್ಯ ಡಾ.ಜಗನ್ನಾಥ ಚವ್ಹಾಣ ಮಾತನಾಡಿದ ವಿದ್ಯಾರ್ಥಿಗಳಿಗೆ ನವರಾತ್ರಿ ನಿಮಿತ್ಯ ವೈವಿಧ್ಯಮಯವಾದ ಚಟುವಟಿಕೆ ಸ್ಪರ್ದೆಗಳನ್ನು ಏರ್ಪಡಿಸಲಾಗಿದ್ದು ಅದರಲ್ಲಿ ವಿಶೇಷವಾಗಿ ದೇಶಿ ನೃತ್ಯ ಪ್ರದರ್ಶನ ಹಮಿಕೊಂಡಿದೆ, ನಾಡಿನ ಸಂಸ್ಕೃತಿ, ದೇಶಿ ಕಲೆಗಳನ್ನು ಉಳಿಸಿ ಬೇಳೆಸುವುದು ನಮ್ಮೆಲ್ಲರ ಆಧ್ಯಕರ್ತವ್ಯವಾಗಿದೆ ಎಂದರು. ಕಾರ್ಯಕ್ರಮದಲ್ಲಿ ಡಾ. ಎಂ.ನಂಜುಂಡಸ್ವಾಮಿ, ಐಕ್ಯೂಎಸಿ ಸಂಂ–ಯೋಜಕಿ ಜಿ .ಎಮ್.ನಾವದಗಿ, ಮಹಿಳಾ ಸಬಲೀಕರಣ ಘಟಕದ ಸಂಯೋಜಕಿ ಪ್ರಿಯಾಂಕ ಮಠದ, ಎಲ್ಲ ಪ್ರಾಧ್ಯಾಪಕ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

### ಚಿಕ್ಕೋಡಿ ಸದಲಗಾ ಕ್ಷೇತ್ರದಲ್ಲಿ ಶಾಲಾ ಕಾಲೇಜುಗಳಿಗೆ ಅವಶ್ಯಕವಾಗಿರುವ ಮೂಲಭೂತ ಸೌಕರ್ಯಗಳನ್ನು ನೀಡಲಾಗುವುದು : ಶಾಸಕ ಗಣೇಶ ಹುಕ್ಕೇರಿ

# 4 ಕೋಟಿ ರೂ ಕಾಮಗಾರಿಗಳಿಗೆ ಶಾಸಕ ಗಣೇಶ ಹುಕ್ಕೇರಿ ಶಂಕು ಸ್ಥಾಪನೆ

**ಚಿಕ್ಕೋಡಿ** : "ವಿದ್ಯಾರ್ಥಿಗಳು ಶಿಕ್ಷಣ ಪಡೆದುಕೊಂಡು ಉನ್ನತ ಸ್ಥಾನ ಹೊಂದಬೇಕೆಂಬ ಕಾರಣಕ್ಕಾಗಿ ಚಿಕ್ಕೋಡಿ ಸದಲಗಾ ಕ್ಷೇತ್ರದಲ್ಲಿ ಶಾಲಾ ಕಾಲೇಜುಗಳಿಗೆ ಅವಶ್ಯಕವಾಗಿರುವ ಮೂಲಭೂತ ಸೌಕರ್ಯಗಳನ್ನು ನೀಡಲಾಗುವುದು" ಎಂದು ಶಾಸಕ ಗಣೇಶ ಹುಕ್ಕೇರಿ ಮಾತನಾಡಿದರು. ತಾಲ್ಲೂಕಿನ ಕೇರೂರ ಗ್ರಾಮದಲ್ಲಿ ಸೋಮವಾರ ವಿವಿಧ ಕಾಮಗಾರಿಗಳಿಗೆ ಶಂಕು ಸ್ಥಾಪನೆ ನೆರವೇರಿಸಿ ಮಾತನಾಡುತ್ತಾ, "ಅ.8 ರಿಂದ ಕ್ಷೇತ್ರದ 430 ಸ್ತ್ರೀ ಶಕ್ತಿ ಸಂಘಗಳಿಗೆ ಪ್ರತಿ ಸಂಘಕ್ಕೆ ತಲಾ 1 ಲಕ್ಷ ಸಹಾಯ ಧನ ವಿತರಣೆ ಮಾಡಲಾಗುವುದು. ಮುಂದಿನ ದಿನಗಳಲ್ಲಿ ಇನ್ನೂ 500ಕ್ಕೂ ಹೆಚ್ಚು ಸ್ತ್ರೀ ಶಕ್ತಿ ಸಂಘಗಳನ್ನು ಗುರುತಿಸಿ ಸಹಾಯ ಧನ ವಿತರಣೆ ಮಾಡಲಾಗುವದು ಎಂದರು. ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಕೇರೂರ ಹಾಲು ಉತ್ಪಾದಕರ ಸಹಕಾರಿ ಸಂಘದ ಅಧ್ಯಕ್ಷ ಮಲ್ಲಿಕಾರ್ಜುನ



ಪಾಟೀಲ ಮಾತನಾಡಿ, "ಕೇರೂರ ಗ್ರಾಮದಲ್ಲಿ ಶಾಸಕ ಗಣೇಶ ಹುಕ್ಕೇರಿ ಅವರು ಸಾಕಷ್ಟು ಕಾರ್ಯಗಳನ್ನು ಕೈಗೊಂಡಿದ್ದು, ಶಾಲಾ ಕಾಲೇಜುಗಳಿಗೆ ಇನ್ನೂ ಹೆಚ್ಚಿನ ಕೊಠಡಿಗಳ ಅವಶ್ಯಕತೆ ಇದೆ. ಇನ್ನೂ ಹಲವು ಬೇಡಿಕೆಗಳನ್ನು ಶಾಸಕರು ಈಡೇ–ರಿಸುವಂತೆ ಮನವಿ ಮಾಡಿಕೊಂಡರು. 36 ಲಕ್ಷ ಮೊತ್ತದಲ್ಲಿ ಕೇರೂರ ಗ್ರಾಮದ ಅಪ್ಪಯ್ಯಗೌಡ ಪಾಟೀಲ ವಿವಿದೋದ್ದೇಶ ಪ್ರಾಥಮಿಕ ಗ್ರಾಮೀಣ ಕೃಷಿ ಸಹಕಾರಿ ಸಂಘದ ಗೋದಾಮು ಕಟ್ಟಡ ನಿರ್ಮಾಣ, ಕೇರೂರನಿಂದ ಜೋಡಕುರಳಿ ಗ್ರಾಮದವರೆಗೆ 2 ಕೋಟಿ ವೆಚ್ಚದಲ್ಲಿ 5.6 ಕಿ.ಮೀ ರಸ್ತೆ ನಿರ್ಮಾಣ ಕಾಮಗಾರಿ, 1.65 ಕೋಟಿ ವೆಚ್ಚದಲ್ಲಿ ಗ್ರಾಮದ ಕರ್ನಾಟಕ ಪಬ್ಲಿಕ್ ಶಾಲೆಯ ಪ್ರಾಥಮಿಕ ವಿಭಾಗಕ್ಕೆ 6 ಕೊಠಡಿಗಳು ಹಾಗೂ ಪ್ರೌಢ ಶಾಲಾ ವಿಭಾಗಕ್ಕೆ 3 ಕೊಠಡಿಗಳ ನಿರ್ಮಾಣ ಹಾಗೂ 3 ಕೊಠಡಿಗಳ ದುರಸ್ತಿ ಕಾಮಗಾ–ರಿಗೆ ಶಾಸಕ ಗಣೇಶ ಹುಕ್ಕೇರಿ ಶಂಕುಸ್ಥಾಪನೆ ನೆರವೇರಿಸಿದರು. ಈ ಸಂದರ್ಭದಲ್ಲಿ ಕೇರೂರ ಗ್ರಾಮ ಪಂಚಾಯಿತಿ ಅಧ್ಯಕ್ಷ ವೀರೇಂದ್ರ ಪಾಟೀಲ, ಮಾಜಿ ಜಿಲ್ಲಾ ಪಂಚಾಯಿತಿ ಸದಸ್ಯ ಮಲ್ಲಪ್ಪ ಬಾಗಿ, ವಿಠ್ಠಲ ವಾಳಕಿ, ಪಿಕೆಪಿಎಸ್ ಅಧ್ಯಕ್ಷ ಬಿ ಡಿ ಪಾಟೀಲ, ಪಿಯು ಕಾಲೇಜು ಪ್ರಾಚಾರ್ಯ ಎಂ ಆರ್ ಬಾಗಾಯಿ, ಮುಖ್ಯ ಶಿಕ್ಷಕ ರಘುನಾಥ ಕಾಂಬಳೆ, ರವಿ ಪಾಟೀಲ, ಬಿ ಎಲ್ ಕಟ್ಟಿ, ಲೋಕೋಪಯೋಗಿ ಅಭಿಯಂತರರಾದ ಬಿ ವಿ ನಾಯಕವಾಡಿ, ಜಿ ಎಸ್ ಕಾಮಕರ ಮುಂತಾದವರು ಉಪಸ್ಥಿತರಿದ್ದರು. ರಾಜೇಸಾಬ ಸೈಯದ್ ಸ್ವಾಗತಿಸಿದರು. ಮಹೇಶ ಮಗದುಮ್ ನಿರೂಪಿಸಿದರು. ಶ್ರೀಶೈಲ ಕೋಲಾರ ವಂದಿಸಿದರು. ಚಿಕ್ಕೋಡಿ ತಾಲ್ಲೂಕಿನ ಕೇರೂರ ಗ್ರಾಮದ 4.1 ಕೋಟಿ ವೆಚ್ಚದ ಕಾಮಗಾ–ರಿಗಳಿಗೆ ಶಾಸಕ ಗಣೇಶ ಹುಕ್ಕೇರಿ ಶಂಕು ಸ್ಥಾಪನೆ ನೆರವೇಸಿದರು. ಈ ಸಂದರ್ಭದಲ್ಲಿ ಮುಖಂಡರಾದ ಮಲ್ಲಿಕಾರ್ಜುನ ಪಾಟೀಲ, ವೀರೇಂದ್ರ ಪಾಟೀಲ, ಮಲ್ಲಪ್ಪ ಬಾಗಿ ಮುಂತಾದವರು ಇದ್ದರು.

# ಕೈ ವಿರುದ್ಧ ಜೋಶಿ ವಾಗ್ದಾಳಿ

**ಹುಬ್ಬಳ್ಳಿ, ;** ಸಂವಿಧಾನದ ಸಂರಕ್ಷಕರು ಎಂದು ಕರೆಸಿಕೊಳ್ಳುವ ಕಾಂಗ್ರೆಸ್‌ನವರು ಸಮಾಜದ ವಿದ್ರೋಹಿ ಶಕ್ತಿಗಳ ಬೆಂಬಲಕ್ಕೆ ನಿಂತಿರುವುದು ನಾಚಿಕೆಗೇಡಿನ ಸಂಗತಿಯಾಗಿದೆ ಎಂದು ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಕಾಂಗ್ರೆಸ್ ಸರ್ಕಾರದ ವಿರುದ್ಧ ಕಿಡಿಕಾರಿದರು.

ನಗರದಲ್ಲಿಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹಳೇಹುಬ್ಬಳ್ಳಿ ಗಲಭೆ ಪ್ರಕರಣವನ್ನು ವಾಪಾಸ್ ಪಡೆದ ವಿಚಾರವಾಗಿ ಪ್ರತಿಕ್ರಿಯಿಸುತ್ತ, ಹಳೇಹುಬ್ಬಳ್ಳಿ ಗಲಾಟೆ ಪೊಲೀಸರ ವಿರುದ್ಧ ನಡೆದಿದ್ದು, ಪೊಲೀಸ್ ಠಾಣೆಯನ್ನು ಸುಡಲು ಯತ್ನ ನಡೆಸಿರುವ ಪ್ರಕರಣವಾಗಿದೆ. ಇದೀಗ ಇಂಥ ಪ್ರಕರಣ ವಾಪಾಸ್ ತೆಗೆದುಕೊಳ್ಳಲು ಮುಂದಾಗಿರುವುದು ಮತಾಂಧ ಶಕ್ತಿಗಳಿಗೆ ಕುಮ್ಮಕ್ಕು ನೀಡುವ ಕೆಲಸ ಮಾಡಿದ ಹಾಗೆ ಎಂದು ಖಂಡಿಸಿದರು.



ಹಳೇಹುಬ್ಬಳ್ಳಿ ಗಲಭೆ ಪ್ರಕರಣವನ್ನು ವಾಪಾಸ್ ಪಡೆಯುವುದನ್ನು ವಿರೋಧಿಸಿ ಮನವಿ ಕೊಡಲು ಬಿಜೆಪಿ ಮುಂದಾಗುತ್ತಿದೆ. ಆದರೆ ಸಿಎಂ ಸಿದ್ದರಾಮಯ್ಯ ಮನವಿ ಸ್ವೀಕಾರ ಮಾಡಲು ಹಿಂದೇಟು ಹಾಕುತ್ತಿದ್ದಾರೆ. ಇದು ಸಿಎಂ ದುರಹಂಕಾರವಾಗಿದೆ. ಮನವಿ ಕೊಡುವುದು ತಪ್ಪೇ ಎಂದವರು ಪ್ರಶ್ನಿಸಿದರು. ಈ ಗಲಭೆ ಪ್ರಕರಣವನ್ನು ವಾಪಾಸ್ ಪಡೆದ–ರೆ ಭಯೋತ್ಪಾದಕರಿಗೆ ಕಾಂಗ್ರೆಸ್ ಬೆಂಬಲ ನೀಡಿದಂತೆ ಆಗುತ್ತದೆ. ಮತಬ್ಯಾಂಕ್ ರಾಜಕೀಯ ಮಿತಿ ಮೀರಿದೆ ಎಂದು ಅವರು ಹರಿಹಾಯ್ದರು.

ನಾವು ಪ್ರಕರಣ ವಾಪಾಸ್ ತೆಗೆದುಕೊಳ್ಳುವ ವಿಚಾರವನ್ನು ಮತ್ತೊಮ್ಮೆ ಪರಿಶೀಲಿಸಬೇಕೆಂದು ಮನವಿ ಕೊಡುತ್ತಿದ್ದೇವೆ. ಅದನ್ನು ಸ್ವೀಕಾರ ಮಾಡುವುದು ಸಿಎಂ ಅವರ ಕರ್ತವ್ಯ. ಅದಕ್ಕಾಗಿ ನಾವು ಪ್ರತಿಭಟನೆ ಮಾಡುತ್ತೇವೆ. ಅವರು ಸ್ವೀಕಾರ ಮಾಡದೇ ಇದ್ದಲ್ಲಿ ಹೋರಾಟ ಮುಂದುವರೆಯುವುದು. ಈ ಬಗ್ಗೆ ಜನಜಾಗೃತಿ ಮಾಡುತ್ತೇವೆ ಎಂದು ಜೋಶಿ ಹೇಳಿದರು.

# ನಾಡಹಬ್ಬ ಮಹೋತ್ಸವ ಕಾರ್ಯಕ್ರಮ

**ಮುನವಳ್ಳಿ, ;** ಪಟ್ಟಣದ ಶ್ರೀ ಪಂಚಲಿಂಗೇಶ್ವರ ದೇವಸ್ಥಾನದಲ್ಲಿ ನಾಡಹಬ್ಬ ಉತ್ಸವ ಸಮಿತಿಯಿಂದ 24ನೇ ನಾಡಹಬ್ಬ ಮಹೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಶಾಸಕ ವಿಶ್ವಾಸ ವೈದ್ಯ ಮಾತನಾಡಿ ನಾಡಹಬ್ಬ ಉತ್ಸವ 24 ವರ್ಷಗಳಿಂದ ಅರ್ಥಪೂರ್ಣವಾಗಿ ಆಚರಿಸಲಾಗುತ್ತಿರುವುದು ಶ್ಲಾಘನೀಯ. ಹಬ್ಬ ಎಲ್ಲರನ್ನೂ ಒಂದುಗೂಡಿಸುತ್ತದೆ ನಮ್ಮ ನಾಡಿನ ಸಮೃದ್ಧಿ ಪ್ರಗತಿ ಸಂಸ್ಕೃತಿ ಮತ್ತು ವೈಭವ ಸಾರುವ ಕಾರ್ಯ ಇದನ್ನು ಸಂಸ್ಕೃತಿ ಬದ್ದವಾಗಿ ನಡೆಸುಕೊಂಡು ಹೋಗಬೇಕು, ಮುಂದಿನ ವರ್ಷ ಬೆಳ್ಳಿವರ್ಷ ಕಾರ್ಯಕ್ರಮ ಆಗಿದ್ದು ವಿಜೃಂಭಣೆಯಿಂದ ಮಾಡಬೇಕು ಎಂದು ಸಹಾಯ ಸಹಕಾರ ನೀಡುವದಾಗಿ ತಿಳಿಸಿದರು. ಪಟ್ಟಣಕ್ಕೆ ಮೂಲಸೌಕರ್ಯ ಒದಗಿಸುವ ಮೂಲಕ ಸಮಗ್ರ ಅಭಿವೃದ್ಧಿಗೆ ಬದ್ದ ಎಂದರು.

ಸೋಮಶೇಖರ ಮಠದ ಶ್ರೀ ಮುರುಘೇಂದ್ರ ಶ್ರೀಗಳು ಮಾತನಾಡಿ ನಮ್ಮ ನಾಡಿನ ಭವ್ಯ ಪರಂಪರೆ ಹಾಗೂ ಶ್ರೀಮಂತಿಕೆ ನಾಡಹಬ್ಬದಲ್ಲಿದೆ ಇಂತಹ ಕಾರ್ಯಕ್ರಮಗಳು ಮರೆಯಾಗದಿರಲಿ ನಮ್ಮ ಸಂಸ್ಕೃತಿ ಯುವ ಪೀಳಿಗೆಗೆ ಮಾದರಿಯಾಗಲಿ ಯುವಕರು ಸಂಸ್ಕೃತಿಯನ್ನು ಬೆಳಸುವ ಕೆಲಸವಾಗಲಿ ಎಂದರು.



ಮಹಾಂತೇಶ ಮುದ್ದನ್ನವರ ಉಪನ್ಯಾಸ ನೀಡಿದರು. ವಿವಿಧ ರಂಗಗಳಲ್ಲಿ ಸೇವೆ ಸಲ್ಲಿಸಿದ ಗಣ್ಯರಿಗೆ ಸನ್ಮಾನ ಜರುಗಿತು.

ರವೀಂದ್ರ ಯಲಿಗಾರ ಅದ್ಯಕ್ಷತೆ ವಹಿಸಿದ್ದರು, ಎಂ.ಆರ್.ಗೋಪಶೆಟ್ಟಿ, ಉಮೇಶ ಬಾಳಿ, ವಿರೇಶ ಬ್ಯಾಹಟ್ಟಿ, ಮಹೇಶ ಯಲಿಗಾರ, ಮುಬಾರಕ ಬೈರಕದಾರ, ಎಪಿಎಂಸಿ ಅಧ್ಯಕ್ಷ ಚಂದ್ರು ಜಂಬ್ರಿ, ಸಿ.ಎಮ್.ಕಮ್ಮಾರ, ಬಿ.ಬಿ.ನಾವಲಗಟ್ಟಿ, ಮೀರಾಸಾಬ ವಟ್ನಾಳ, ಪುರಸಭೆ ಮುಖ್ಯಾಧಿಕಾರಿ ಮಹೇಂದ್ರ ತಿಮ್ಮಾಣಿ, ನಾಡಹಬ್ಬ ಉತ್ಸವ ಸಮಿತಿಯ ಸುರೇಶ ಜಾವೂರ, ಶ್ರೀಶೈಲ ಹಂಜಿ, ಟಿ.ಎನ್. ಮುರಂಕರ, ಮಂಜುನಾಥ ಬೆಟಗೇರಿ, ಕೇಶವ ಭಂಡಾರಿ, ನಾರಾಯಣ ಭಂಡಾರಿ, ವೈ. ಎಫ್.ಶಾನಭೋಗ, ಗಂಗಾಧರ ಗೊರಾಬಾಳ ಇತರರು ಉಪಸ್ಥಿತರಿದ್ದರು.

ಧಾರವಾಡದ ರಂಗ ಸಾಮ್ರಾಟ ಅಭಿನಯ ಶಾಲೆ ತಂಡದಿಂದ ಅನುಭವ ಮಂಟಪ ನಾಟಕ ಪ್ರದರ್ಶನ ಜರುಗಿತು.

ಬಾಳು ಹೊಸಮನಿ ಕಾರ್ಯಕ್ರಮ ನಿರೂಪಿಸಿ ವಂದಿಸಿದರು.

# ಜಗತ್ತು ಭಾರತದ ಸಂಸ್ಕಾರ ಅರಿಯಲು ಮುಂದಾಗಿದೆ:ಸತೀಶ ಕುಮಾರ

**ತಾಳಿಕೋಟೆ ;** 99ವರ್ಷಗಳಿಂದ ಇಡೀ ದೇಶವನ್ನು ಸಂಘಟಿಸುವ ಹಾಗೂ ದೇಶಭಕ್ತಿಯನ್ನು ಉದ್ದೀಪನಗೊಳಿಸುವ ಕಾರ್ಯವನ್ನು ರಾಷ್ಟ್ರೀಯ ಸ್ವಯಂಸೇವಕ ಸಂಘ ಮಾಡುತ್ತಾ ಸಾಗಿದೆ ಸಂಘ ಸ್ಥಾಪನೆಯಾಗಿ 100ವರ್ಷಗಳಾಗುತ್ತಿರುವ ಈ ಸಂಧರ್ಬದಲ್ಲಿ ಭಾರತೀಯ ಕುಟುಂಬ ಪದ್ಧತಿ ಎಲ್ಲರೊಂದಿಗೆ ಸಾಮರಸ್ಯದಿಂದ ಬಾಳುವ ಕಾರ್ಯ ಇನ್ನೂ ಮಾಡಬೇಕಾಗಿದೆ ಎಂದು ಉತ್ತರಕರ್ನಾಟಕ ಪ್ರಾಂತ ಕಾರ್ಯಕಾರಣಿ ಸದಸ್ಯರಾದ ಸತೀಶ ಕುಮಾರ ಅವರು ನುಡಿದರು.

ಶನಿವಾರರಂದು ಸ್ಥಳೀಯ ರಾಷ್ಟ್ರೀಯ ಸ್ವಯಂ ಸೇವಕ ಸಂಘದವತಿಯಿಂದ ವಿಜಯದಶಮಿ ನಿಮಿತ್ಯವಾಗಿ ಏರ್ಪಡಿಸಲಾದ ಪಥಸಂಚಲನದ ನೇತೃತ್ವ ವಹಿಸಿ ಮಾತನಾಡುತ್ತಿದ್ದ ಅವರು ಸಂಘದ ಸಂಸ್ಥಾಪನ ದಿನವೆನ್ನುವುದು ವಿಜಯದಶಮಿ ದಿನವಾಗಿದೆ ಇದನ್ನು ಪ್ರತಿವರ್ಷವೂ ಇಡೀ ಜಗತ್ತಿನಾದ್ಯಂತ ಆಚರಿಸಿಕೊಂಡು ಬರಲಾಗುತ್ತಿದೆ ಎಂದರು.ಇಂದಿನ ದಿನಮಾನದಲ್ಲಿ ಜಗತ್ತು ಎದುರಿಸುತ್ತಿರುವ ಅನೇಕ ಸಮಸ್ಯೆಗಳಿಗೆ ಭಾರತೀಯ ಜೀವನ ಪದ್ಧತಿಯಲ್ಲಿ ಪರಿಹಾರವಿದೆ ಎಂದ ಅವರು ಸಾಮರಸ್ಯದಿಂದ ಬಾಳುವುದು ಹಾಗೂ ಪರಿಸರ ಸಂರಕ್ಷಣೆ , ನಾಗರೀಕ ಪ್ರಜೆಗಳಂತಹ ಹಲವು ವಿಚಾರಗಳನ್ನು ನಾವೆಲ್ಲರೂ ಅಳವಡಿಸಿಕೊಂಡು ದೇಶವನ್ನು ಮುನ್ನಡೆಸಬೇಕಾಗಿದೆ ಎಂದರು. ಇಡೀ ದೇಶದಲ್ಲಿ ಆರ್.ಎಸ್.ಎಸ್ ಸಂಘದ ಶಾಖೆಗಳು ಏಳು ಲಕ್ಷಕ್ಕೂ ಮೇಲ್ಪಟ್ಟು ಹೊಂದಿವೆ



ಈ ಸಂಘಟನೆ ಪ್ರಾರಂಭದ ಸಮಯದಲ್ಲಿ ಕೆಲವರು ನಗೆಚೆಲ್ಲಿದ್ದರೂ ಈಗ ಸಂಘದ ಬೃಹತ್ ಆಕಾರದ ಬೆಳವಣಿಗೆಯನ್ನು ಕಂಡು ದಿಗಬ್ರಮೆಗೊಂಡಿದ್ದಾರೆಂದರು. ಸಂಘವು ತನ್ನ ವಯಕ್ತಿಕ ಹಿತಾಸಕ್ತಿ ಎಂದೂ ಬಯಸಿಲ್ಲಾ ಬಯಸುವುದು ಇಲ್ಲ ದೇಶ ಕಾಪಾಡುವಂತಹ ಕಾರ್ಯಕ್ಕೆ ಈ ಹಿಂದಿನಿಂದಲೂ ತನ್ನ ಸೇವಾಕಾರ್ಯ ಚಟುವಟಿಕೆಗಳೊಂದಿಗೆ ಮುಂದುವರೆದಿದೆ ಎಂದರು. ಇಗ್ಲೆಂಡನಲ್ಲಿ ಸಂಘದ ಶಾಖೆ ಪ್ರಾರಂಭಿಸಿದಾಗ 50ನೇ ವರ್ಷದ ಸಮಾರಂಭದಲ್ಲಿ ಅಲ್ಲಿಯ ಮಹಾರಾಣಿ ಎಲಿಜಾಬತ್ ಅವರು ಸಂಘದ ಕಾರ್ಯ ಚಟುವಟಿಕೆಗಳನ್ನು ಮೆಚ್ಚಿ ಸಂಘದ ನಡೆನುಡಿಗಳನ್ನು ತಮ್ಮ ದೇಶದ ಜನತೆಗೆ ಕಲಿಸುವಂತಹ ಕಾರ್ಯಆಗಬೇಕಾಗಿದೆ ಎಂದು ಅವರು ಹೇಳಿದ ಮಾತನ್ನು ಹೇಳಿದ ಸತೀಶ ಜಿ ಅವರು ವಿಜಯದಶಮಿ ಎಂದರೇನು ಅದನ್ನು ಆಚರಿಸಲು ಕಾರಣವೆನ್ನೆಂಬುದನ್ನು ಬಹುಮಾರ್ಮಿಕವಾಗಿ ವಿವರಿಸಿದರು.

ಕಾರ್ಯಕ್ರಮದ ಮೊದಲಿಗೆ ಗಣವೇಶಧಾರಿ ಸ್ವಯಂಸೇವಕರ ಪಥಸಂಚಲನವು ಐತಿಹಾಸಿಕ ರಾಜವಾಡೆ ಇಂದ ಪ್ರಾರಂಭಗೊಂಡು ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಂಚರಿಸುತ್ತಾ ಸಾಗಿ ನೀಲಕಂಠೇಶ್ವರ ದೇವಸ್ಥಾನದ ಸಭಾಭವನದಲ್ಲಿ ಸಭೆಯಾಗಿ ಮಾರ್ಪಟ್ಟಿತು.

ವೇದಿಕೆಯ ಮೇಲೆ ವಿಜಯಪುರ ವಿಭಾಗ ಸಂಚಾಲಕರರಾದ ಚಿದಂಬರ ಕರಮರಕರ, ಸಂಚಲನದ ಉಸ್ತುವಾರಿಯಾದ ಪ್ರಕಾಶ ಕಟ್ಟಿಮನಿ, ದಿನಕರ ಜೋಶೀ,ಸಂಗಮೇಶ ಮದರಕಲ್ಲ,ಚಂದ್ರಶೇಕರ ದೊಡಮನಿ,ಪ್ರತೀಕ ಕುಲ್ಕರ್ಣಿ,ಸಂಗಮೇಶ ಪಾಲ್ಕಿ,ಋಷಿಕೇಶ ಗೊಟಗುಣಕಿ,ಆಕಾಶ ಪಿಂಪಳೆ,ತಿಲಕ ಬಯಾಸ ಮಲ್ಲಿಕಾರ್ಜುನ ಹಿಪ್ಪರಗಿ, ಶಾಮ ಹಂಚಾಟೆ, ರಾಘವೇಂದ್ರ ಬಿಜಾಪೂರ, ಪ್ರಮೋದ ಅಗರವಾಲ, ರಾಜಣ್ಣ ಸೊಂಡೂರ,ಆರ.ಎಸ್.ಪಾಟೀಲ್ ಕೂಚಬಾಳ, ರಾಜು ಹಂಚಾಟೆ, ಯಲ್ಲೇಶ ಧಾಯಪುಲೆ, ರಾಜು ಅಲ್ಲಾಪೂರ ಮೊದಲಾದವರು ಉಪಸ್ಥಿತರಿದ್ದರು. ದೀಪಕ ಕುಲ್ಕರ್ಣಿ ಪ್ರಾರ್ಥಿಸಿದರು.ಬಸವನಗೌಡ ಪಾಟೀಲ ಸ್ವಾಗತಿಸಿದರು.ತಿಪ್ಪಾರೆಡ್ಡಿ ವಂದಲಿ ವಯಕ್ತಿಕ ಗೀತೆ ಹಾಡಿದರು. ಪ್ರದೀಪ ಭುಸಾರೆ ವಂದಿಸಿದರು.

# ಮಸೂತಿ: ಬಾಲಕಿಯರ ಖೋ ಖೋ ವಿಭಾಗ ಮಟ್ಟಕ್ಕೆ ಆಯ್ಕೆ



**ಕೊಲ್ಹಾರ :** ತಾಲೂಕಿನ ಮಸೂತಿ ಗ್ರಾಮದ ಶ್ರೀ ಗುರು ಸಂಗನಬಸವೇಶ್ವರ ವಜ್ರಮಹೋತ್ಸವ ಪ್ರೌಢಶಾಲೆಯ ಬಾಲಕಿಯರು ಇಂಡಿ ತಾಲೂಕು ಮಿರಗಿ ಗ್ರಾಮದ ಯಲಗೂರೇಶ್ವರ ಪ್ರೌಢಶಾಲೆ ಆವರಣದಲ್ಲಿ ಜರುಗಿದ ಜಿಲ್ಲಾಮಟ್ಟದ ಖೋ ಖೋ ಪಂದ್ಯಾವಳಿಯಲ್ಲಿ ಪ್ರಥಮ ಸ್ಥಾನ ಪಡೆದು ವಿಭಾಗ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಮಸೂತಿ ಗ್ರಾಮದ ಬಾಲಕೀಯರ ಖೋ ಖೋ ಸತತ ಮೂರನೇ ಬಾರಿ ವಿಭಾಗ ಮಟ್ಟಕ್ಕೆ ಆಯ್ಕೆಯಾಗಿ ಗ್ರಾಮ, ತಾಲೂಕು,ಜಿಲ್ಲೆಯ ಕೀರ್ತಿ ಹೆಚ್ಚಿಸಿದ್ದಾರೆ ಎಂದು ದೈಹಿಕ ಶಿಕ್ಷಕ ಎಂ ಜಿ ಪಾಟೀಲ ಹರ್ಷ ವ್ಯಕ್ತಪಡಿಸಿದ್ದಾರೆ.ಮಕ್ಕಳಿಗೆ ವೀರೇಶ್ವರ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಜಿ ಆರ್ ಬೀಳಗಿ,ಸಿ ಪಿ ಪಾಟೀಲ,ಬಿ ಎಂ ಮೇಟಿ ಹಾಗೂ ಪದಾಧಿಕಾರಿಗಳು, ಗ್ರಾಮ ಪಂಚಾಯಿತಿ ಅಧ್ಯಕ್ಷ ರೇಣುಕಾ ಹರಿಜನ,ಉಪಾಧ್ಯಕ್ಷ ನಂದಬಸಪ್ಪ ಬರಗಿ, ಮಾಜಿ ಗ್ರಾ.ಪಂ ಅಧ್ಯಕ್ಷ ಸಂತೋಷ ಗಣಾಚಾರಿ, ಹಾಗೂ ಸದಸ್ಯರು ವಿವಿದೊದ್ದೇಶ ಕೃಷಿ ಸಹಕಾರಿ ಸಂಘದ ಅಧ್ಯಕ್ಷ ಕೆ ವಿ ಕುಲಕರ್ಣಿ ಹಾಗೂ ಸದಸ್ಯರು ಹಾಗೂ ಶಾಲೆಯ ಮುಖ್ಯೋಪಾಧ್ಯಾಯ ಎಚ್ ಆರ್ ರಾಠೋಡ,ಸಿಬ್ಬಂದಿ ವರ್ಗ, ಗ್ರಾಮಸ್ಥರು,ಯುವಕಮಿತ್ರರು ಅಭಿನಂದಿಸಿದ್ದಾರೆ.

# ಕಿತ್ತೂರು ಉತ್ಸವದ ಪ್ರಚಾರಕ್ಕೆ ಹೆಚ್ಚಿನ ಒತ್ತು



**ಚನ್ನಮ್ಮನ ಕಿತ್ತೂರು, :** 200ನೇ ವರ್ಷದ ಚನ್ನಮ್ಮನ ವಿಜಯೋತ್ಸವವನ್ನು ಅಚ್ಚುಕಟ್ಟಾಗಿ ಅದ್ದೂರಿಯಿಂದ ಆಚರಿಸುವುದರ ಜೊತೆಗೆ ಉತ್ಸವದ ಪ್ರಚಾರಕ್ಕೆ ಹೆಚ್ಚಿನ ಒತ್ತು ಕೊಡುವುದರ ಮೂಲಕ ಸುಸಜ್ಜಿತ ಮಾಧ್ಯಮ ಕೇಂದ್ರ ಸ್ಥಾಪಿಸುವುದಾಗಿ ಜಿಲ್ಲಾಧಿಕಾರಿ ಮೊಹಮ್ಮದ ರೋಶನ್ ಹೇಳಿದರು.

ಪಟ್ಟಣದ ಮಹೇಶ ಶೆಟ್ಟರ ಕಲ್ಯಾಣ ಮಂಟಪದಲ್ಲಿ ನಡೆದ ಮಾಧ್ಯಮ ಪ್ರತಿನಿಧಿಗಳ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದ ಅಕ್ಟೋಬರ 23,24,25 ರಂದು ಜರುಗಲಿರುವ ಉತ್ಸವ ಕಾರ್ಯಕ್ರಮದ ವರದಿಗಾಗಿ ಜಿಲ್ಲೆ–ಹೊರಜಿಲ್ಲೆಗಳಿಂದ ಆಗಮಿಸುವ ಎಲ್ಲ ಮಾಧ್ಯಮ ಪ್ರತಿನಿಧಿಗಳಿಗೆ ಯಾವುದೇ ಅನಾನುಕೂಲವಾಗದಂತೆ ನಿಗಾವಹಿಸಲು ಅಧಿಕಾರಿಗಳಿಗೆ ತಿಳಿಸಿದರು." ಮಾಧ್ಯಮ ಪ್ರತಿನಿಧಿಗಳೊಂದಿಗೆ ಸಮನ್ವಯ ಸಾಧಿಸಲು ಉಸ್ತುವಾರಿಯಾಗಿ ಪರೀಕ್ಷಣಾರ್ಥಿ ಐಎಎಸ್ ಅಧಿಕಾರಿ ದಿನೇಶಕುಮಾರ್ ಮೀನಾ ಅಧಿಕಾರ ವಹಿಸಿಕೊಳ್ಳುತ್ತಾರೆ.

ಮಾಧ್ಯಮ ಕೇಂದ್ರದಲ್ಲಿ ಗಣಕಯಂತ್ರ, ವೇಗದ ಇಂಟರನೆಟ್ ಹಾಗೂ ಒಳ್ಳೆಯ ಆಸನದ ವ್ಯವಸ್ಥೆ ಮಾಡಬೇಕು. ಅದಲ್ಲದೇ ಕಾರ್ಯಕ್ರಮದ ಮುಖ್ಯ ವೇದಿಕೆ ಮತ್ತು ಮಾಧ್ಯಮ ಕೇಂದ್ರಕ್ಕೆ ತಲುಪಲು ಪ್ರತ್ಯೇಕ ಮಾರ್ಗ ವ್ಯವಸ್ಥೆ ಕಲ್ಪಿಸಬೇಕು.

ಮಾಧ್ಯಮ ಕೇಂದ್ರಕ್ಕೆ ಹಾಗೂ ವೇದಿಕೆಯ ಹತ್ತಿರ ಗ್ಯಾಲರಿ ಕಡೆಗೆ ಸಾರ್ವಜನಿಕರು ಹೋಗದಂತೆ ನಿಗಾವಹಿಸಬೇಕು. ಪತ್ರಕರ್ತರಿಗೆ ಪಾಸ್ ವಿತರಣೆ ಮತ್ತು ಎಲ್ಲ ರೀತಿ ಸೌಲಭ್ಯ ಒದಗಿಸುವಂತೆ ತಿಳಿಸಿದರು."

ಒಟ್ಟಾರೆಯಾಗಿ "ಕಿತ್ತೂರು ಉತ್ಸವ ಯಶಸ್ವಿಯಾಗಲು ಜಿಲ್ಲಾಡಳಿತ ಜೊತೆ ಮಾಧ್ಯಮದವರು ಕೈಜೋಡಿಸಬೇಕು." ಎಂದು ಮನವಿ ಮಾಡಿದರು.

ವೇದಿಕೆಯಲ್ಲಿ ಐಎಎಸ್ ಅಧಿಕಾರಿ ದಿನೇಶಕುಮಾರ್ ಮೀನಾ, ಉಪವಿಭಾಗಾಧಿಕಾರಿ ಪ್ರಭಾವತಿ ಫಕ್ಕೀರಪುರ, ವಾರ್ತಾ ಇಲಾಖೆ ಉಪ ನಿರ್ದೇಶಕ ಗುರುನಾಥ ಕಡಬೂರ್, ತಹಶೀಲ್ದಾರ ರವೀಂದ್ರ ಹಾದಿಮನಿ, ತಾಪಂ ಇಓ ಕಿರಣ ಘೋರ್ಪಡೆ, ಪತ್ರಕರ್ತರ ಜಿಲ್ಲಾಧ್ಯಕ್ಷ ದಿಲೀಪ ಕುರಂದವಾಡೆ, ಎಸಿ ಕಛೇರಿ ಸಹಾಯಕ ಮಂಜುನಾಥ ಅಂಗಡಿ, ಜಿಲ್ಲಾ–ತಾಲೂಕ ಪತ್ರಕರ್ತರು ಸೇರಿದಂತೆ ಇನ್ನಿತರರಿದ್ದರು.

# ಭಾರಿ ಮಳೇಗೆ ಜನಜೀವನ ಅಸ್ತವ್ಯಸ್ತ

**ನವಲಗುಂದ :** ಕಳೆದ 3 ದಿನಗಳಿಂದ ಬಿಟ್ಟು ಬಿಡದೇ ಸುರಿಯುತ್ತಿರುವ ಭಾರಿ ಮಳೆಗೆ ತಾಲೂಕಿನಾದ್ಯಂತ ಹಳ್ಳ,ಕೊಳ್ಳಗಳು ತುಂಬಿ ತುಳುಕುವ ಮೂಲಕ ಜನಜೀವನ ಅಸ್ತವ್ಯಸ್ತಗೊಂಡಿದೆ.

ಪಟ್ಟಣದ ಅಂಬೇಡ್ಕರ ನಗರ ಸೇರಿದಂತೆ ತಾಲೂಕನ ಗುಮ್ಮಗೋಳ,ಶಿರಕೋಳ,ಮೊರಬ ಗ್ರಾಮಗಳಲ್ಲಿ ಪ್ರಹಾಹದಿಂದ ತುಂಬಿದ ಬೆಣ್ಣಿಹಳ್ಳದ ನೀರು ಮನೆಗೆ ನುಗ್ಗಿದೆ. ತಿರ್ಲಾಪೂರ ಗ್ರಾಮದಲ್ಲಿನ ಕೆರೆಯ ಒಡಲು ತುಂಬಿ ನೀರು ಹೊರಚೆಲ್ಲಿದ್ದರಿಂದ ಅಕ್ಕ,ಪಕ್ಕದ ಮನೆಗಳಿಗೆ ನೀರು ನುಗ್ಗಿದ ಘಟನೆ ಶನಿವಾರ ಜರುಗಿದೆ.



ನಿರಂತರ ಮಳೆಯಿಂದಾಗಿ ಬೆಳೆದು ನಿಂತ ಈರುಳ್ಳಿ,ಗೋವಿನಜೋಳ ಹಾಗೂ ಹತ್ತಿ ಬೆಳೆಗಳು ಬೆಣ್ಣಿಹಳ್ಳದ ಪ್ರವಾಹಕ್ಕೆ ಬಲಿಯಾಗಿದ್ದರೆ ಜತೆಗೆ ಮಳೆಯ ರಭಸಕ್ಕೂ ಕೆಲ ಬೆಳೆಗಳು ನೆಲಕಚ್ಚಿವೆ.

ತಾಲೂಕಿನಾದ್ಯಂತ ಒಟ್ಟು 8965 ಹೆಕ್ಟೇರಗೂ ಹೆಚ್ಚು ಪ್ರದೇಶದದಲ್ಲಿ ಬೆಳೆ ಹಾನಿಯಾಗಿದೆ ಎಂದು ಅಂದಾಜಿಸಲಾಗಿದೆ ಎಂದು ತಾಲೂಕಾ ಆಡಳಿತ ಮಾಹಿತಿ ನೀಡಿದೆ.

ಅರೆಕುರಟ್ಟಿ ಗ್ರಾಮದಲ್ಲಿ 2 ಮನೆಗಳು ಬೆಣ್ಣಿಹಳ್ಳದ ನೀರಿನಿಂದ ಜಲಾವೃತಗೊಂಡರೆ ತಾಲೂಕಿನಾದ್ಯಂತ ಸುರಿದ ಮಳೆಗೆ 131 ಮನೆಗಳಿಗೆ ನೀರು ನುಗ್ಗಿದ ಪರಿಣಾಮ ಮನೆಯಲ್ಲಿದ್ದ ಆಹಾರ ಧಾನ್ಯಗಳು ಹಾನಿಗೊಳಗಾದರೆ ಇನ್ನು 47ಮನೆಗಳು ಭಾಗಶ:ಕುಸಿದು ಬಿದ್ದಿವೆ. ತಾಲೂಕಿನ ಶಿರಕೋಳ ಗ್ರಾಮದ ಸಮೀಪ ತುಪ್ಪರಿ ಹಳ್ಳದ ಹರಿವು ಹೆಚ್ಚಾಗಿದ್ದರೂ ದುಸ್ಸಾಹಸ ಮೆರೆದ ಬೈಕ ಸವಾರರಿಬ್ಬರೂ ಹಳ್ಳ ದಾಟುವ ಸಂದರ್ಭದಲ್ಲಿ ನೀರಿನಲ್ಲಿ ಕೊಚ್ಚಿ ಹೋಗಿ ಮುಳ್ಳಿನ ಕಂಟಿಯಲ್ಲಿ ಸಿಲುಕಿಕೊಂಡ ಘಟನೆ ಶುಕ್ರವಾರ ಜರುಗಿದ್ದು, ಗ್ರಾಮಸ್ಥರ ಸಹಾಯದಿಂದ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಭಾರಿ ಮಳೆಗೆ ತಾಲೂಕಾ ಕೇಂದ್ರದಿಂದ ಪಡೆಸೂರ, ಹಾಲಕುಸುಗಲ್,ಶಾನವಾಡ, ತಿರ್ಲಾಪೂರ, ಮೊರಬ,ತಲೆಮೊರಬ ಆಹೆಟ್ಟಿ ಶೀರೂರು ಹಾಗೂ ಗುಮ್ಮಗೋಳಲ್ಲಿ ಸೇತುವೆಗಳು ಮುಳುಗಿದ್ದರಿಂದ ರಸ್ತೆ ಸಂಪರ್ಕ ಕಡೆದುಕೊಂಡಿವೆ.

ತಾಲೂಕಿನ ಕಡದಳ್ಳಿ,ಗುಡಿಸಾಗರ,ನಾಗನೂರು ,ಅರಹಟ್ಟಿ, ತಡಹಾಳ ಹಾಗೂ ಅಮರಗೋಳ ಗ್ರಾಮಗಳೂ ಬೆಣ್ಣಿಹಳ್ಳದ ಪ್ರವಾಹದ ಭೀತಿಯಲ್ಲಿದ್ದು,

ತಾಲೂಕಾ ಆಡಳಿತ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಂಡಿದೆ.

ಭಾರಿ ಮಳೆಯಿಂದ ಹಳ್ಳಕೊಳ್ಳಗಳು ತುಂಬಿ ಹರಿಯುತ್ತಿದ್ದು ರೈತರು ತುಂಬಿ ಹರಿಯುತ್ತಿರುವ ಹಳ್ಳಗಳನ್ನು ದಾಟುವ ಸಾಹಸಕ್ಕೆ ಮುಂದಾಗಬಾರದೆಂದು ತಹಶೀಲ್ದಾರ ಸುಧೀರ ಸಾಹುಕಾರ ಸಾರ್ವಜನಿಕರಲ್ಲಿ ಮನವಿ ಮಾಡಿದ್ದಾರೆ.

ನಿರಂತರವಾಗಿ ಸುರಿದ ಮಳೆಯಿಂದಾಗಿ ದಸರಾ ಹಬ್ಬವು ಕಳೆ ಕಳೆದುಕೊಂಡಂತಾಗಿದ್ದು, ಬೆಣ್ಣಿಹಳ್ಳದ ಪ್ರವಾಹದಿಂದ ಜನಜೀವನ ಅಸ್ತವೆಸ್ಥಗೊಂಡರೆ ಹಿಂಗಾರಿ ಬಿತ್ತನೆಯ ಅವಸರದಲ್ಲಿದ್ದ ರೈತರು ನಿರಾಶೆಯಲ್ಲಿ ಮುಳುಗುವಂತೆ ಮಾಡಿದೆ.

# ಧರ್ಮದ ಬಗ್ಗೆ ಅಭಿಮಾನ, ಪ್ರೀತಿ ಇರಬೇಕು,ಈ ಬಗ್ಗೆ ಜನ ಸಾಮಾನ್ಯರಲ್ಲಿ ಜಾಗೃತಿ ಮೂಡಿಸಬೇಕಿದೆ: ಶಿವಾನಂದ ಶಿವಾಚಾರ್ಯರು

**ಇಂಡಿ:** ಧರ್ಮ ರಕ್ಷಿಸಿದವರನ್ನು ಧರ್ಮವೇ ರಕ್ಷಿಸುತ್ತದೆ. ಧರ್ಮ ಜಾಗೃತಿ ಕಾರ್ಯಗಳು ಹೆಚ್ಚು ಹೆಚ್ಚು ನಡೆಯಬೇಕು ಎಂದು ನಾದ ಗ್ರಾಮದ ಶಿವಾನಂದ ಶಿವಾಚಾರ್ಯರರು ಹೇಳಿದರು.

ತಾಲೂಕಿನ ನಾದ ಕೆಡಿ ಗ್ರಾಮದ ಕನ್ನಲಿಂಗೇಶ್ವರ ದೇವಸ್ಥಾನದಲ್ಲಿ ಕನ್ನಲಿಂಗೇಶ್ವರ ಟ್ರಸ್ಟನಿಂದ ನಡೆದ ನವರಾತ್ರಿ ನಿಮಿತ್ಯ ನಡೆದ ಧಾರ್ಮಿಕ ಕಾರ್ಯಕ್ರಮ ಮತ್ತು ಸಂತ ಬಾಳು ಮಾಮಾ ಪುರಾಣ ಕಾರ್ಯಕ್ರಮದಲ್ಲಿ ಮಾತನಾಡಿದರು.

ಪ್ರತಿಯೊಬ್ಬರಲ್ಲಿ ಧರ್ಮದ ಬಗ್ಗೆ ಅಭಿಮಾನ, ಪ್ರೀತಿ ಇರಬೇಕು,ಈ ಬಗ್ಗೆ ಜನ ಸಾಮಾನ್ಯರಲ್ಲಿ ಜಾಗೃತಿ ಮೂಡಿಸಬೇಕಿದೆ ಎಂದರು.

ನಾದ ಗ್ರಾಮದ ಸಾವಯುಕ ಕೃಷಿಕ ಮತ್ತು ರಾಜ್ಯ ಪ್ರಶಸ್ತಿ ವಿಜೇತ ರೈತ ಎಸ್.ಟಿ.ಪಾಟೀಲ ಮಾತನಾಡಿದರು.

ಧರ್ಮೋ ರಕ್ಷಿತಿ ರಕ್ಷಿತಾ ದರ್ಮ ಯಾರ ಸ್ವತ್ತಲ್ಲ. ಧರ್ಮ ಎಂದರೆ ಯಾರ ಮನಸ್ಸು ನೋವಿಸದೇ ಇರುವದು ಎಂದರು.

ಜಮಖಂಡಿಯ ಮಲ್ಲಿಕಾರ್ಜುನ ಶಾಸ್ತ್ರಿಗಳು ಸಂತ ಬಾಳು ಮಾಮಾರವರ ಜೀವನ ಮತ್ತು ಪವಾಡಗಳ ಕುರಿತು ಮಾತನಾಡಿದರು.



ಗೋಳಸಾರದ ಪುಂಡಲಿಂಗ ಶಿವಯೋಗಿಗಳ ಸಾನಿಧ್ಯ ವಹಿಸಿದ್ದರು ಬಸವರಾಜ ಪಾಟೀಲ,ಸದ್ಗುರು ಮಲ್ಲಿಕಾರ್ಜುನ ಶಾಸ್ತ್ರಿಗಳು,ಶೇಖರ ಕುಮಾರ ಪಾಟೀಲ, ಗೊಲ್ಲಾಳಪ್ಪಗೌಡ ಬಿ.ಜಿ.ಲಾಳಸಂಗಿ, ಇಶ್ವರಯ್ಯ ಹಿರೇಮಠ ವೇದಿಕೆಯ ಮೇಲಿದ್ದರು.

ಗ್ರಾಮದ ಬಿರಾದಾರ ರಾಮಚಂದ್ರಗೌಡ ರವಿಕಿರಣ ಕೆರುಟಗಿ, ಎಸ್.ಪಿ.ತೋಂಟಾಪುರ ಮಾತನಾಡಿದರು.

ಮೋನಪ್ಪ ತಾವರಖೇಡ,ಕನ್ನಪ್ಪ ಬಿರಾದಾರ, ಡೋಣಿ, ವಿಠಲ ಪುಂಡಲೀಕ ಜಡಿಮನಿ,ಭಾನಪ್ಪಗೌಡ ಪಾಟೀಲ, ಎಸ್.ಪಿ.ತೋಂಟಾಪುರ,ಸಂತೋಷ ಘಡೇಕರ, ಅಮಸಿದ್ದ ಮಾರಾಯಗೋಳ ಮತ್ತಿತರಿದ್ದರು.

# ಕಾಂಗ್ರೆಸ್ ಕಚೇರಿಯಲ್ಲಿ ರತನ ಟಾಟಾಗೆ ಶ್ರದ್ಧಾಂಜಲಿ

**ವಿಜಯಪುರ :** ದೇಶದ ಹೆಮ್ಮೆಯ ಉದ್ಯಮಿ ಟಾಟಾ ಸಮೂಹದ ಮುಖ್ಯಸ್ಥರಾದ ಶ್ರೀ ರತನ ಟಾಟಾ ರವರ ನಿಧನಕ್ಕೆ ತೀವ್ರ ಶೋಕ ವ್ಯಕ್ತಪಡಿಸಿ ವಿಜಯಪುರ ಜಿಲ್ಲಾ ಕಾಂಗ್ರೆಸ್ ಕಾರ್ಯಾಲಯದಲ್ಲಿ ಶ್ರದ್ಧಾಂಜಲಿಯನ್ನು ಸಲ್ಲಿಸಲಾಯಿತು.

ದಿ. ರತನ ಟಾಟಾ ರವರು ಕೇವಲ ಉದ್ಯಮಿ ಅಷ್ಟೇ ಆಗಿರಲಿಲ್ಲ ಅವರು ಮಹಾನ್ ದೇಶ ಪ್ರೇಮಿಯಾಗಿದ್ದರು. ದೇಶ ಮತ್ತು ದೇಶದ ಜನತೆಯ ಬಗ್ಗೆ ಅಪಾರವಾದ ಕಾಳಜಿ ಉಳ್ಳವರಾಗಿದ್ದರು. ಅವರು ದೇಶದ ಬಡ ಮತ್ತು ಮಧ್ಯಮ ವರ್ಗದವರಿಗಾಗಿ ಅನೇಕ ಉದ್ದಿಮೆಗಳನ್ನು



ಸ್ಥಾಪಿಸಿದ್ದರು. ಉಪ್ಪಿನಿಂದ ಹಿಡಿದು ವಿಮಾನಯಾನದ ವರೆಗೆ ಅವರು ಉದ್ದಿಮೆಗಳನ್ನು ಸ್ಥಾಪಿಸಿದ್ದರು. ಬಡ ಮತ್ತು ಮಧ್ಯಮ ವರ್ಗದವರಿಗಾಗಿ ಅನೇಕ ಉತ್ಪನ್ನಗಳನ್ನು ಪರಿಚಯಿಸಿದ್ದರು. ತಮ್ಮ ಉದ್ದಿಮೆಗಳ ಮೂಲಕ ಲಕ್ಷಾಂತರ ಭಾರತೀಯರಿಗೆ ಉದ್ಯೋಗಗಳನ್ನು ನೀಡಿದ್ದರು. ಮಧ್ಯಮ ವರ್ಗದವರಿಗಾಗಿ ಕಡಿಮೆ ಬೆಲೆಯ ಕಾರು, ಬೈಕ್‌ಗಳು ಕೈಗೆಟಕುವಂತೆ ಮಾಡಿದ್ದರು. ಇವರ ನಿಧನದಿಂದ ದೇಶ ಒಬ್ಬ ಹೆಮ್ಮೆಯ ಪುತ್ರನನ್ನು ಕಳೆದುಕೊಂಡಂತಾಗಿದೆ ಎಂದು ಸ್ಮರಿಸಿ ರತನ ಟಾಟಾ ರವರ ಆತ್ಮಕ್ಕೆ ಶಾಂತಿ ಸಿಗಲೆಂದು ಎರಡು ನಿಮಿಷಗಳ ಕಾಲ ಮೌನಾಚರಣೆ ಮಾಡಲಾಯಿತು. ಇದೇ ಸಂದರ್ಭದಲ್ಲಿ ರತನ್ ಟಾಟಾ ರವರ ಬಗ್ಗೆ ಶ್ರೀ ವಿಜಯಕುಮಾರ ಘಾಟಗೆ ರವರು ಮಾತನಾಡಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷರುಗಳಾದ ಚಾಂದಸಾಬ ಗಡಗಲಾವ, ಸುಭಾಷ ಕಾಲೇಬಾಗ ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಗಳಾದ ಜಾಕೀರ ಮುಲ್ಲಾ, ವಸಂತ ಹೊನಮೋಡೆ, ಎಂ. ಎಂ. ಮುಲ್ಲಾ (ದ್ಯಾಬೇರಿ), ಹಾಜಿಲಾಲ ದಳವಾಯಿ, ಅಮಿತ ಚವ್ಹಾಣ, ನಿಂಗಪ್ಪ ಸಂಗಾಪೂರ, ಮುಲುಕಸಾಬ ಕಡಣಿ (ಚಾಂದಕವಠೆ), ಹಾಗೂ ಇತರ ಪದಾಧಿಕಾರಿಗಳು ಹಾಜರಿದ್ದರು.

"SIHI KAHI" Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State